


ಕೆಂಪೆಚ್ಚರದ ಆಚೆಗೆ
– ಜೀವ ರಕ್ಷಣೆ

BEYOND RED ALERT
- SAVING LIVES

ಶ್ರೀ. ಹೆಚ್. ಜಿ. ರಾಘವೇಂದ್ರ ಸುಹಾಸ ಐ.ಪಿ.ಎಸ್.

ಆರಕ್ಷಕ ಮಹಾನಿರೀಕ್ಷಕರು, ಉತ್ತರ ವಲಯ ಬೆಳಗಾವಿ, ಕರ್ನಾಟಕ

Suhas

ಕರ್ನಾಟಕ ರಾಜ್ಯ ಪೊಲೀಸ್

ಉತ್ತರ ವಲಯ, ಬೆಳಗಾವಿ

ಉತ್ತರ ವಲಯ ಬೆಳಗಾವಿ
2019 ಆಗಸ್ಟ ಮತ್ತು ಸೆಪ್ಟೆಂಬರ ನೆರೆಪ್ರವಾಹ

ಪರಿಕಲ್ಪನೆ, ಪ್ರಕಟಣೆ ಮತ್ತು ಹಕ್ಕುಗಳು
ಶ್ರೀ ಹೆಚ್. ಜಿ. ರಾಘವೇಂದ್ರ ಸುಹಾಸ, ಐಪಿಎಸ್.
ಆರಕ್ಷಕ ಮಹಾನಿರೀಕ್ಷಕರು,
ಉತ್ತರ ವಲಯ, ಬೆಳಗಾವಿ.

ಪ್ರಥಮ ಮುದ್ರಣ : 2020
ಪುಟಗಳು : 92+4

ನಿರ್ವಹಣೆ :
1) ಶ್ರೀ ರಾಜೇಶ ಎಸ್. ತೆಗ್ಗಿನಮನಿ
2) ಶ್ರೀ ನಿರಂಜನ ಪಾಟೀಲ
3) ಕರ್ನಾಟಕ ರಾಜ್ಯ ಪೊಲೀಸ್

ಧನ್ಯವಾದಗಳು
1) ಶ್ರೀ ಪ್ರವೀಣ ಸೂದ್, ಐಪಿಎಸ್, ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಬೆಂಗಳೂರು
2) ಶ್ರೀಮತಿ ವಿಜಯಲಕ್ಷ್ಮಿ ಬಿದರಿ, ಐಎಎಸ್.
3) ಶ್ರೀ ಬೊಮ್ಮನಹಳ್ಳಿ, ಐಎಎಸ್, ಜಿಲ್ಲಾಧಿಕಾರಿಗಳು ಬೆಳಗಾವಿ
4) ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು
5) ಸರಕಾರಿ ಇಲಾಖೆಗಳು
6) ಫೋಟೋಗ್ರಾಫರಗಳು
7) ಮಾಧ್ಯಮದವರು

ವಿನ್ಯಾಸ ಮತ್ತು ಮುದ್ರಣ
ಓಮೇಗಾ ಪ್ರಿಂಟರ್ಸ್, ಬೆಳಗಾವಿ.



H.G. Raghavendra Suhas
IPS

Beyond Red Alert – saving lives

The nature has to be always respected . The people have to be always cared and loved. The beauty of the passion of the river Krishna was seen in the year 2019 floods, during months of August and September. Highest quantity water flowed in the stream in the century , as could be seen from the recorded data of River Krishna and its tributaries, spanning across the state Karnataka. The river basin saw a vast inundation and devastation . The river broke its own records made earlier. The river Krishna possessed back its encroached land and also it reclaimed stealthily . And ofcourse we are not there to challenge Mother Nature . But respect the Nature and move away well in time and save lives. And efforts were made to bring about a balance between nature and humanity by intervening rightly as Police and by applying all possible knowledge as Engineer.

On a cursory look it appeared to be fine and definite imbalance between humanity and nature. Our duty of protecting life and conserving humanity required a greater commit--tment and intense discipline . The situation alerted me to think back as an Engineer and encouraged me to devise an action plan that would have farther impact on lives of the people . The one that that could shape up our future vision in balancing the delicate relation between nature and humanity, during Floods . As a responsible engineer , a plan was made . Lots of field data was collected from various sources, from various locations, from various points . They were collected ,collated , correlated and deeply analysed . The frontier engineering concepts of QUANTUM COMPUTATION was applied in the hour of crisis. The PREDICTIVE ANALYSIS was made to prevent loss of lives . The outcomes of the analysis was transformed and was applied on field terrain . The devastation situation was visualised. The sequence of devastation was also visualised by keeping the reference of time and space . The geological conditions, physical features of terrain , slope of river beds , leeves, bunds , natural and artificial obstructions , catchment area features etc was considered . The time taken by water to reach a specific level in a specific habitat village was assessed . Necessary directions were issued to the field staff on real time basis . The action plan was implemented . The policemen were guided to assist the people in a specific manner . The public was safely evacuated without chaos. Highest quantity of water 5 ,35,000 cuses flowed in the river stream . The situation could have marooned the civilisation on the river Krishna banks . With all respects to the mother nature , 8 ,66,846 persons including men women children and a large number of cattle and domestic animals were saved systematically .

The necessity was felt to keep the experiences in public domain so that people are aware and educated about the catastrophic situations in the river Krishna basin. In this book, efforts are made to explain the implemention aspects . Efforts are made to make the people understand about the visible factors . Those factors are the transformed outcomes of complex quantum computing and analysis. This would help in understanding the process of evolution of floods and manifestation. The time can be predicted for a approaching imminent devastation . And that time would be the window period for a safe evacuation. The planning made, preparations made for flood management, the list of data collection points, the way of data collection, the arrival at a opinion, steps to be taken in real time, locations to be focussed , time for the water to arrive , time to reach for different levels of inundation in villages , level identification, tentative people to be shifted , evacuation, where to be evacuated, logistics, etc are all explained in a regional language Kannada in a simpler manner for the understanding by the policemen , rescuers and public . And initiate ian timely reaction. The intention is to educate people on floods and explain our responsibility of respecting the boundaries defined by the mother river . Attempt is made to keep the public memory alive and is documented for a farther benefit, in saving lives of the people in future ,in similar situations.





ಪರಿವಿಡಿ

ಹಾರೈಕೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ

ಮಾನ್ಯ ಗೃಹ ಸಚಿವರು, ಕರ್ನಾಟಕ ರಾಜ್ಯ ಸರಕಾರ

ಸ್ವಾತಂತ್ರ್ಯ ಪೂರ್ವದಿಂದಲೂ ಸುಮಾರು ದಶಕಗಳ ಇತಿಹಾಸವನ್ನೊಳಗೊಂಡ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಕಾರ್ಯಕ್ಷಮತೆಗೆ ಮತ್ತು ಧೀರತೆಗೆ ಹೆಸರು ವಾಸಿಯಾಗಿದ್ದು, ಸಾಮಾಜಿಕ ಮಾರ್ಪಾಡುಗಳಿಗೆ ಪರಿಷ್ಕೃತಗೊಳ್ಳುತ್ತ ಮುನ್ನಡೆದು, ದೇಶದಲ್ಲಿಯೇ ಕರ್ನಾಟಕ ರಾಜ್ಯ ಪೊಲೀಸ್ ಮುಂಚೂಣಿಯಲ್ಲಿದೆ. ಇಲ್ಲಿ ಉದಾತ್ತತೆ ಮತ್ತು ಧೈರ್ಯ ಮೆರೆದ ಪೊಲೀಸರು ಸಾರ್ವಜನಿಕರ ಪ್ರಾಣ ಮತ್ತು ಆಸ್ತಿಗಳ ರಕ್ಷಣೆ ಮತ್ತು ಭದ್ರತೆಯಲ್ಲಿ ತಮ್ಮ ಪ್ರಾಣವನ್ನು ಸಹ ತ್ಯಾಗ ಮಾಡಿದ ಸಾಕಷ್ಟು ನಿದರ್ಶನಗಳಿವೆ.

ಇತ್ತೀಚಿನ ಅಗಸ್ಟ್–ಸೆಪ್ಟೆಂಬರ 2019 ರಲ್ಲಿ ರಾಜ್ಯದಲ್ಲಿ ಭಾರಿ ಪ್ರಮಾಣದ ಮಳೆಯಿಂದ ಮತ್ತು ಪ್ರವಾಹದಿಂದ, ಪ್ರಕೃತಿಯ ವಿಕೋಪವು ಕಂಡು ಬಂದಿತು. ನಿಯಂತ್ರಣಕ್ಕೆ ಮೀರಿ ಇದ್ದ ಪ್ರಕೃತಿಯ ವಿರಾಟ ಸ್ವರೂಪದಲ್ಲಿ, ಮನುಷ್ಯ ಮತ್ತು ಪ್ರಕೃತಿಯ ಸಮತೋಲವನ್ನು ಗುರುತಿಸಿಕೊಂಡು ಅದನ್ನು ಕಾಪಾಡಿಕೊಂಡು ಬರುವ ಒಂದು ಜವಾಬ್ದಾರಿಯನ್ನು ಪೊಲೀಸ ಆಡಳಿತವು ದಕ್ಷತೆಯಿಂದ ನಿರ್ವಹಿಸಿದೆ.

ಹಿರಿಯ ಕಿರಿಯ ಅಧಿಕಾರಿಗಳೆನ್ನದೆ ಒಂದೇ ಕುಟುಂಬದ ಸದಸ್ಯರಂತೆ ಸಮಾಜದ ಎಲ್ಲರನ್ನು ತೊಡಗಿಸಿಕೊಂಡು, ಸಂತ್ರಸ್ತರಲ್ಲಿ ಸುರಕ್ಷತೆಯ ಭರವಸೆಯನ್ನು ಮೂಡಿಸಿ, ವ್ಯವಸ್ಥಿತವಾಗಿ, ಹಗಲು ಮತ್ತು ರಾತ್ರಿ, ಮುಳುಗಡೆ ಪ್ರದೇಶದ ಸರಿಸುಮಾರು 8,66,846 ಜನರನ್ನು ಸುರಕ್ಷತೆಡೆಗೆ ಸ್ಥಳಾಂತರಿಸಿದರು. ಭಾರಿ ಸಂಖ್ಯೆಯ ಜನತೆ ಮತ್ತು ಜಾನುವಾರಗಳನ್ನು ಯಾವುದೇ ಅವ್ಯವಸ್ಥೆ, ಗೊಂದಲಗಳಲ್ಲದೆ ಸ್ಥಳಾಂತರಿಸಿ ಕಾರ್ಯ ನಿರ್ವಹಿಸಿದರು. ಈ ಒಂದು ನಿರ್ವಹಣೆಯ ಜ್ಞಾನ ಸಂಚಯವನ್ನು ತಯಾರಿಸಿ ನಮ್ಮ ಉತ್ತರ ವಲಯದ ಪೊಲೀಸ್ ಸಿಬ್ಬಂದಿಯವರಿಗೆ, ಮುಂದೆ ಭವಿಷ್ಯದಲ್ಲಿ ಪ್ರಕೃತಿಯ ವಿಕೋಪ ನಿರ್ವಹಣಾ ಪ್ರಕ್ರಿಯೆಯಲ್ಲಿ ಒಂದು ದೂರಗಾಮಿ ಕಾರ್ಯಸೂಚಿಯಾಗಿ, ಜೀವರಾಶಿ ಮತ್ತು ಆಸ್ತಿ ಕಾಪಾಡಿಕೊಳ್ಳಲು **"BEYOND RED ALERT-SAVING LIVES"** ಸಹಾಯಕವಾಗುವುದೆಂದು ಆಶಿಸುತ್ತಾ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ


12/08/2019 17:23

ಸಂದೇಶ



ಶ್ರೀಮತಿ ನೀಲಮಣಿ ಎನ್. ರಾಜು, ಐಪಿಎಸ್

ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು

ಪ್ರವಾಹವು ಒಂದು ನೈಸರ್ಗಿಕ ವಿದ್ಯಮಾನವಾಗಿದ್ದು, ಪ್ರಕೃತಿಯ ಮುಂದೆ ಮಾನವನ ಪ್ರಯತ್ನಗಳು ಗೌಣ, ಉತ್ತರ ವಲಯವು ಸಹ್ಯಾದ್ರಿ ಪರ್ವತ ಶ್ರೇಣಿ ಮತ್ತು ಬಯಲು ಪ್ರದೇಶ ಮಧ್ಯದಲ್ಲಿ ಕೃಷ್ಣಾ ಕೊಳ್ಳದ ನದಿಗಳಿಂದ ಕೂಡಿದ ಭೂಪ್ರದೇಶವಾಗಿರುತ್ತದೆ. 2019 ರ ಆಗಸ್ಟ್‌ನಲ್ಲಿ ಸಹ್ಯಾದ್ರಿ ತಪ್ಪಲಿನಲ್ಲಿ ಸುರಿದ ಭಾರಿಮಳೆಯು, ಕೃಷ್ಣಾ ಮತ್ತು ಅದರ ಉಪನದಿ ಪಾತ್ರಗಳ ಜಲಧಾರೆಯು, ಸಾಮಾನ್ಯಕ್ಕಿಂತ ಅಧಿಕವಾಗಿ ಮಹಾರಾಷ್ಟ್ರದಿಂದ ಹೆಚ್ಚಿನ ನೀರು ಬಂದಿದ್ದರಿಂದ ಉತ್ತರ ವಲಯದ ಜಿಲ್ಲೆಗಳಲ್ಲಿ ಭಾರಿ ಪ್ರವಾಹ ಮತ್ತು ನೆರೆಹಾವಳಿ ಸೃಷ್ಟಿಯಾಗಿ, ಜನಜೀವನ ಮತ್ತು ಜೀವಸಂಕುಲ ರಕ್ಷಣೆಯು ಪೊಲೀಸರಿಗೆ ಒಂದು ದೊಡ್ಡ ಸವಾಲಾಗಿತ್ತು.

ಕೃಷ್ಣಾ ನದಿ ಪ್ರದೇಶವು ಪರಿಸರ ಸಂವೇದಶೀಲವಾಗಿದ್ದು, ಈ ಪ್ರದೇಶಗಳಲ್ಲಿ ಪ್ರವಾಹ ನಿರ್ವಹಣೆ ವ್ಯವಸ್ಥೆಯು ಮುಖ್ಯವಾಗಿ ಮುಳುಗಡೆಯಾಗುವ ಪ್ರದೇಶಗಳ ಗುರುತಿಸುವಿಕೆ, ಸಂತ್ರಸ್ತ ಜನರ ಸ್ಥಳಾಂತರ, ರಕ್ಷಣೆ, ಸುರಕ್ಷತೆ ಮತ್ತು ಜಾನುವಾರುಗಳ ಸಾಗಾಣಿಕೆ ಇತ್ಯಾದಿ ಕ್ರಮಗಳನ್ನು ಮುಂಜಾಗ್ರತವಾಗಿ ಕೈಗೊಳ್ಳುವುದು ಸವಾಲಿನ ಕೆಲಸವಾಗಿತ್ತು. 2019ರ ಆಗಸ್ಟ್‌ನಲ್ಲಿ ಉಂಟಾದ ಪ್ರವಾಹ ಪೀಡಿತ ಪ್ರದೇಶಗಳ ರಕ್ಷಣಾ ಕಾರ್ಯದ ನೇತೃತ್ವವನ್ನು ಶ್ರೀ ಹೆಚ್. ಜಿ. ರಾಘವೇಂದ್ರ ಸುಹಾಸ, ಐಪಿಎಸ್, ಆರಕ್ಷಕ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ರವರು ವಹಿಸಿಕೊಂಡು ಎಲ್ಲ ಇಲಾಖೆಗಳೊಂದಿಗೆ ಸಮನ್ವಯತೆಯಿಂದ ಯಶಸ್ವಿಯಾಗಿ ನಿಭಾಯಿಸಿ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಈ ಪ್ರವಾಹ ನಿರ್ವಹಣೆಯ ಅನುಭವಗಳನ್ನು ಕ್ರೋಢೀಕರಿಸಿ, ಸಾಮಾಜಿಕ ಕಳಕಳಿಯಿಂದ ಮತ್ತು ಇದೇ ತರಹದ ಭವಿಷ್ಯದ ಪರಿಸ್ಥಿತಿಯಲ್ಲಿ ನಮ್ಮ ಪೊಲೀಸರು ವ್ಯವಸ್ಥಿತವಾಗಿ ಯಾವುದೇ ತೊಡರುಗಳಿಲ್ಲದೇ, ಜನರ ರಕ್ಷಣೆ ಮಾಡಲು ಅನುಕೂಲವಾಗಲೆಂದು ಈ ಒಂದು ಕಿರುಹೊತ್ತಿಗೆ ಹೊರತಂದಿದ್ದು ಪ್ರಶಂಸನೀಯ. ಈ ಕಿರುಹೊತ್ತಿಗೆ "BEYOND RED ALERT-SAVING LIVES" ಧ್ಯೇಯೋದ್ದೇಶದ ಜೀವಗಳನ್ನು ರಕ್ಷಿಸಲು ಮಾರ್ಗದರ್ಶಕವಾಗಿರುವ ಉಪಯುಕ್ತ ಮಾಹಿತಿ ಕೈಪಿಡಿ ತಂದಿರುವುದು ಶ್ಲಾಘನೀಯವಾಗಿದೆ.

ಶ್ರೀಮತಿ ನೀಲಮಣಿ ಎನ್.ರಾಜು, ಐಪಿಎಸ್.
ಮಹಾನಿರ್ದೇಶಕರು ಮತ್ತು
ಆರಕ್ಷಕ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು



ಮುನ್ನುಡಿ



ಹೆಚ್. ಜಿ. ರಾಘವೇಂದ್ರ ಸುಹಾಸ, ಐಪಿಎಸ್.

ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿ.

ಪ್ರಕೃತಿಯನ್ನು ನಾವು ಯಾವಾಗಲೂ ಗೌರವಿಸಬೇಕು ಮತ್ತು ಜನತೆಯನ್ನು ಅಷ್ಟೇ ಪ್ರೀತಿಸಬೇಕು. ಶತಮಾನ ಕಂಡರಿಯದ ಪ್ರಕೃತಿಯ ಸ್ವಭಾವವನ್ನು ನಾವು ಅಗಸ್ಟ್ ಸೆಪ್ಟೆಂಬರ್ 2019, ಉತ್ತರ ಕರ್ನಾಟಕದಲ್ಲಿ ಕಂಡೆವು. ಅತಿ ವ್ಯಾಪಕವಾದ ವೃಷ್ಟಿಯು ಕೃಷ್ಣೆಯಲ್ಲಿ ಅಗಾದವಾದ ಜಲರಾಶಿಯನ್ನೇ ಹರಿಸಿತು. ನಿಗದಿಪಡಿಸಿದ ತನ್ನದೇ ಮಿತಿಗಳನ್ನು ಕೃಷ್ಣೆ ಒಡಲೊಳಗೆ ಸೆಳೆದುಕೊಂಡು, ಮಾನವ ಮತ್ತು ಪ್ರಕೃತಿಯ ನಡುವೆ ಇದ್ದ ಸಹಜ ಸಂಬಂಧ , ಸಂವೇದನೆ ಮತ್ತು ಸಂವಹನ ಅಸಮತೋಲನಗೊಂಡಿತು.

ಜೀವರಾಶಿ ಸಂರಕ್ಷಿಸುವ ನಮ್ಮ ಜವಾಬ್ದಾರಿಯಲ್ಲಿ ಇನ್ನೂ ಹೆಚ್ಚಿನ ಶ್ರದ್ಧೆಯನ್ನು ಮತ್ತು ಕಾಳಜಿಯನ್ನು , ಒಂದು ದೂರಗಾಮಿ ಕಾರ್ಯ ಸೂಚಿಯ ಕಡೆಗೆ ಆಲೋಚನೆ ಮಾಡುವಂತೆ ಪ್ರೇರೇಪಿಸಿತು. ಈ ಒಂದು ಸಮಯದಲ್ಲಿ ನಾವು ಸಂಗ್ರಹಿಸಿದ ಅಗಾಧವಾದ ಮಾಹಿತಿ ಮತ್ತು ದತ್ತಾಂಶಗಳನ್ನು ಕ್ರೋಡಿಕರಿಸಿ, ವಿಶ್ಲೇಷಿಸಿ, ಸಕಾಲದಲ್ಲಿ ಕ್ವಾಂಟಮ್ ಗಣಕಶಾಸ್ತ್ರ (**Quantum Computing**) ಮತ್ತು ಪ್ರಿಡೆಕ್ಟಿವ್ ಅನಾಲೈಸಿಸ್ (**Predictive Analysis**) ಆಧಾರಿತ ಜ್ಞಾನವನ್ನು ಬಳಸಿ, ವಿವೇಚಿಸಿ, ಸರಿಯಾದ ನಿರ್ಣಯಗಳನ್ನು ತೆಗೆದುಕೊಂಡು, ಪ್ರಕೃತಿ ವಿಕೋಪದ ಪರಿಸ್ಥಿತಿಯಲ್ಲಿ ಸಿಬ್ಬಂದಿಗಳಿಗೆ ಒಂದು ಸರಳವಾದ ನಿರ್ವಹಣಾ ಅನುಕ್ರಮಣಿಕೆ ದೊರಕಿಸಲಾಯಿತು. ಈ ವರ್ಷ ಕೃಷ್ಣೆಯಲ್ಲಿ ಹಿಂದೆಂದೂ ಕಾಣದಂತಹ 5 ಲಕ್ಷ 23 ಸಾವಿರ ಕ್ಯೂಸೆಕ್ಸ ನೀರು ಹರಿದಿತ್ತು. ಈ ಸಮಯದಲ್ಲಿ ಒಟ್ಟಾರೆ ಸುಮಾರು 8,66,846 ಸಂಖ್ಯೆಯ ಜನತೆಯನ್ನು ವ್ಯವಸ್ಥಿತವಾಗಿ ಸ್ಥಳಾಂತರಿಸಿ, ಸುರಕ್ಷಿಸಲಾಯಿತು.

ಈ ಒಂದು ನಿರ್ವಹಣೆಯಲ್ಲಿ ಮಾಡಿಕೊಂಡ ಪೂರ್ವಭಾವಿ ಸಿದ್ಧತೆಗಳನ್ನು , ಕಾರ್ಯರೂಪಗಳನ್ನು, ಅನುಭವಗಳನ್ನು ಮುಂದೆ ಪ್ರಕೃತಿ ಎಲ್ಲ ವಿಕೋಪ ಮತ್ತು ಪ್ರವಾಹ ಸಂದರ್ಭದಲ್ಲಿ ಉಪಯುಕ್ತವಾಗಲಿ ಎಂಬ ಉದ್ದೇಶದಿಂದ ಈ ಕೃತಿಯಲ್ಲಿ ಸರಳವಾಗಿ ನಿರೂಪಿಸುವ ಪ್ರಯತ್ನ ಮಾಡಲಾಗಿದೆ. ಈ ಕಾರ್ಯದಲ್ಲಿ ಹಗಲು ರಾತ್ರಿ ಶ್ರಮಿಸಿದ ಎಲ್ಲ ಸಿಬ್ಬಂದಿಗಳಿಗೆ, ಹಿರಿಯ ಅಧಿಕಾರಿಗಳಿಗೆ ಮತ್ತು ಬೆನ್ನೆಲುಬಾಗಿ ನಿಂತ ರಾಜ್ಯ ಸಕಾರ್ರಕ್ಕೆ ವಂದನೆಗಳನ್ನು ಸಲ್ಲಿಸುತ್ತಾ , ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತಾ ...


ರಾಘವೇಂದ್ರ ಸುಹಾಸ


ಹೆಚ್. ಜಿ. ರಾಘವೇಂದ್ರ ಸುಹಾಸ, ಐಪಿಎಸ್



Agrani River
Kudachi(R)
Krishna River
Sadalga
Krishna River
Chinchali
Dudhganga
Harugeri
Raibag
Terdal
Rabkavi
Naganur
Chikodi
Bavachi
Nipani
Vedaganga
Mahalingapur
Kabbur
Mudalagi
Ghataprabha
Pimpalgaon
Sankeshwar
Gadhinglaj
Hukkeri
Ghatprabha
Yadawad
Kowade
Hidkal Dam
Kunnal
Ajara
Ghataprabha River
Mamadapur
Saligeri
Bhutramhatti
Chandgad
Yaragatti
Kadoli
Nesargi
Markandeya
Shinoli
Belgaum
Sambra
Sogal
Munavalli
Ballari Nala
Bailhongal
Sampgaon
Kinaye
Desur
M K Hubli
Belawadi
Malaprabha River
Khanapur




Kakhandaki Tanda
Basavana Bagewadi
Huvin Hippargi
Tumbgi
Shurpali
Mamadapur
Bidari
Kudgi
Kalkeri
Jamkhandi
Kolhar
Alamatti Dam
Mantur
Mudhol
Girisagar
Bilgi
Muddebihal
Arakeri
Kudal Sangam
Muddapur
Bevur
Bagalkot
Lokapur
Shirur
Kamatagi
Batkurki
Guledagudda
Amingad
Hungund
Kerur
Aihole
Hiresinganagutti
Mudkavi
Adagal
Ilkal
Pattadakal
Badami
Dammur
Kyadiguppa
Sirguppa
Hanamsagar
Holealur
Kushtagi
Sudi
Gajendragad
Nargund
Rona
Hanchinal
Banahatti
Savadi
Mudhol
Imagery ©2020 TerraMetrics, Map data ©2020 India 3D Earth view is not available Terms Send feedback 10 km



N
S


Krishna Basin
Dhom Balkwadi
Dhom
(223 km / 35 Hrs)
Krishna River
Kanher
(193 km/ 38 Hrs)
Venna River
SATARA (178 km/27 Hrs)
Urmodi
Urmodi River
Kashil
Tarali
Tarali River
Umbraj
Koyna
(175 km/23 Hrs)
Koyna River
KARAD (107 km /14 Hrs)
Yevati Masoli
Yerala River
Morana
SANGLI (0 Km / 0.00 Hrs)
Warana
(115 km / 17 Hrs)
Warna River
Haripur
Kadavi
Kasari
Panchganga River
Narsobawadi
(68.5 km / 12.5 Hrs)
KOLHAPUR
RAJAPUR (38 km / 6 Hrs)
KARNATAKA STATE
Kumbhi
Tulshi
Radhanagari
Bhogavati River
(73 km /6.3 Hrs)
Agrani River
Dudhganga
Dudhganga River
Patgaon
Chikotra
HIPPARGI (141km)
Chitri
Ghatprabha River
Hidkal Dam
Majarakop (251 km)
Jhambare
Jangamhatti
Almatti Dam
ALMATTI (270 km)
(286 km) Malprabha River
Navilu Teertha
Narayanpur Dam
(317 km)
Bhima River (522 km)
Jurala Dam
(671 km) Tungbhadra River
T B Dam
Sri Shailam Dam
(770 km)
Dindi River
Nagarjun Sagar Dam
(869 km)
Dameracheela River
Paleru River
Keesara River
Prakasham Barrage
(1055 km)
Bay of Bengal
(1144 km)




KRISHNA BASIN
MAHARASHTRA
Bhima
Koyna
Munneru
Nagarjuna
Sagar
Project
Bhima
Krishna
Ghataprabha
Krishna
Malaprabha
Srisailam Project
Tungabhadra
KARNATAKA
Varada
ANDHRA PRADESH
Vedavati
Tunga
GOA
MUMBAI
ARABIAN SEA


KALABURAGI
VIJAYAPURA
YADGIR
BELAGAVI
RAICHUR
KOPPALA
GADAG


GRAPHICAL REPRESENTATION OF KRISHNA & TRIBUTARIES.
Mahabaleshwar Range
Chandoli Range
GaganBawada Range
Daajipur Range
Kankumbi Range Western Ghat
Krishna River
Balakwadi Dam
Dhom Dam 13.5 TMC
Wai
Krishna River
Mahabaleshwar
Venna Lake
Venna River
Kanher Dam 10.1 TMC
Venna River
Mahuli
Satara
Urmodi Dam
Urmodi River
Kashil
Tarali Dam
Tarali River
Krushna River
Koregaon
Uttemand Dam
Mand River
Umbraj
Nandani River
Yerala River
Bhagyaganga River
Kera River
Patan
Solashi River
Koyana River
Kumbharli Ghat
KoyanaDam 105 TMC
Koyana River
Karad
Kadepur
Morana Dam
Morna River
Amba Ghat
Shirala
Krushna River
Warna Dam 32.4 TMC
Warna River
Kadavi Dam
Kadvi River
Yerala River
Bramhnal
Sangli
Anuskara Ghat
Gajapur Dam
Kasari River
Inchalkaranji
Kode Budruk Dam
PanchGanga River
Nivade
Gharpan
Koge
Nasrasobawadi
Khidrapur
Kolhapur
GaganBawada Ghat
Gaganbavada Dam
Kumbhi River
Dhamana River
Towards Karnataka
Krishna River
Yedur Karnataka
TulashiDam
Tulashi River
KasabaBeed
Kallol Barrage
Agrani River
Fonda Ghat
Radhanagari Dam
Bhogavati River
Kagal
Uagar Barrage
Kalammvadi Dam
Dudhganga River
Kurnur
Athani
Mahishwadgi Barrage
Belagavi
Patgaon Dam
Vedganga River
Chikotra Dam
Chikotra River
Hipparagi Barrage
Amboli Ghat
Hiranyakeshi River
Chikkodi
Raibag
Ghatapprabha River
Hidkal Dam 51 TMC
Mudalagi
Gokak
Almatti Dam 119.57 TMC
Markandeya River
Kundaragi Village
Hukkeri
Ballari Nala
Ramdurg
Krishna River
Bailhongal
Chorla Ghat
Malaprabha River
Navilteerth Dam 37.73 TMC
Narayanapura Dam
Khanapur Village
Kittur Village
Savadatti
Haratala River





REDMI NOTE 5 PRO
MI DUAL CAMERA



RIVER KRISHNA

YEAR-WISE CHART : MEASURED AT HIPPARAGI BARRAGE

YEAR	DATE	WATER LEVEL IN MTRS ABOVE MSL	MAXIMUM DISCHARGE IN CUSECS	OBSERVATIONS
1978	20-08-20178	523.70	211260	
1979	13-08-1979	526.00	271600	High Flood Level
1980	08-08-1980	525.40	253600	
1981	09-08-1981	522.80	185500	
1982	17-08-1982	523.50	205700	
1983	19-08-1983	525.40	263600	
1984	21-07-1984	524.40	232932	
1985	05-08-1985	524.40	232932	
1986	15-08-1986	524.90	248564	
1987	11-07-1987	522.90	188650	
1988	06-08-1988	525.30	260600	
1989	29-07-1989	526.70	302600	High Flood Level
1990	22-08-1990	526.10	287600	
1991	02-08-1991	526.60	302600	High Flood Level
1992	17-08-1992	523.50	205700	
1993	07-08-1993	523.80	214040	
1994	20-07-1994	527.00	314600	High Flood Level
1995	23-07-1995	522.40	172900	
1996	30-07-1996	523.50	205700	
1997	12-07-1997	523.10	194580	
1998	11-07-1998	522.20	166600	
1999	26-07-1999	524.70	242931	
2000	16-07-2000	522.40	172900	
2001	12-07-2001	521.70	153260	
2002	15-08-2002	523.00	191800	
2003	30-07-2003	521.00	213495	
2004	16-08-2004	525.00	147810	
2005	09-08-2005	528.33	440000	High Flood Level
2006	15-08-2006	527.45	251854	
2007	05-07-2007	525.50	219796	
2008	17-08-2008	525.70	240792	
2009	19-07-2009	523.10	167962	
2010	30-07-2010	524.35	183402	
2011	07-09-2011	252.40	265375	
2012	02-08-2012	521.10	100210	
2013	03-07-2013	525.00	233300	
2014	03-08-2014	523.45	203000	
2015	27-06-2015	520.70	111000	
2016	15-07-2016	524.65	268000	
2017	24-07-2017	522.15	175000	
2018	22-07-2018	524.20	205000	
2019	**12-08-2019**	**530.15**	**523000**	**Highest Flood Level (IN LAST CENTURY)**
2020				




ON AIR

POLICE


POLICE



ಒಳ ಸುಳಿವುಗಳು

ಸಾಮಾನ್ಯವಾಗಿ ಯಾವುದೇ ತರಹದ ಪ್ರಕೃತಿ ವಿಕೋಪಗಳು ಆದಾಗ ಸಾವು, ನೋವು, ನಷ್ಟಗಳು ಉಂಟಾಗುತ್ತವೆ. ಇದರಿಂದ ನೇರವಾಗಿ ಆರ್ಥಿಕ ಮತ್ತು ಸಾಮಾಜಿಕ ಚೈತನ್ಯದ ಮೇಲೆ ಹೊಡೆತ ಬೀಳುತ್ತವೆ. ರಾಜ್ಯದ ವಿಕಾಸ ಮತ್ತು ಅಭಿವೃದ್ಧಿಯ ಮೇಲೆ ಪ್ರಭಾವ ಬೀರುತ್ತದೆ.

2019 ಜುಲೈ ತಿಂಗಳನಲ್ಲಿ ಬೆಳಗಾವಿ ಜಿಲ್ಲೆಯ ಪಶ್ಚಿಮಘಟ್ಟದ ಸಹ್ಯಾದ್ರಿ ಘಟ್ಟದಲ್ಲಿ ಧಾರಾಕಾರವಾದ ಮಳೆ ಬರತೊಡಗಿತು. ಸಾಮಾನ್ಯವಾಗಿ ಬರಬೇಕಾಗಿದ್ದ ಮಾನ್‌ಸೂನ್ ಮುಂಗಾರು ಮಳೆ ಸ್ವಲ್ಪ ಹೆಚ್ಚಿನ ಮಟ್ಟದಲ್ಲಿ ವ್ಯಾಪಕವಾಗಿ ಬೀಳತೊಡಗಿತು. ಕಾಲುವೆಗಳಲ್ಲಿ, ನದಿ ಪಾತ್ರಗಳಲ್ಲಿ ರಭಸವಾಗಿ ಹರಿಯುವ ನೀರು ಕಾಣತೊಡಗಿತು. ಆಕಾಶದಲ್ಲಿಯೂ ಸಹ ಕಾರ್ಮೋಡಗಳು ವ್ಯಾಪಕವಾಗಿ ಆವರಿಸಿದ್ದವು. ಹಾಗೆಯೇ ಅರಬ್ಬಿ ಸಮುದ್ರದ ಮೇಲೆ ದಟ್ಟನೆಯ ಮಳೆಯ ಕಾರ್ಮೋಡಗಳನ್ನು ಗಮನಿಸಿ ಮುಂದಾಗಬಹುದಾದ ಸಂಕಷ್ಟವನ್ನು ಮನಗಂಡೆವು. ನಂತರದಲ್ಲಿಯೇ ಒಂದು "ರೆಡ್‌ಅಲರ್ಟ್ ಎಂಬುವ ಜವಾಬ್ದಾರಿಯುತ ಘೋಷಣೆ ಜ್ಯಾರಿಯಾಗಿದ್ದು. ಅದು ಗೊತ್ತಿರುವ ವಿಷಯವೇ. ಈ ಹಿಂದೆ ಹಲವು ಬಾರಿ "ರೆಡ್‌ಅಲರ್ಟ್" ಘೋಷಣೆಗಳು ಆಗಿವೆ. ಆದಾಗ್ಯೂ ಅಗಾಧವಾದ ಸಾವು, ನೋವುಗಳು, ನಷ್ಟಗಳು ರೆಡ್‌ಅಲರ್ಟ್ ಘೋಷಣೆಯೊಂದಿಗೆ ಸ್ವಾಭಾವಿಕ ಎನ್ನುವ ಮಟ್ಟಿಗೆ ಜೊತೆಜೊತೆಯಲ್ಲಿಯೇ ಆಗುವುದನ್ನು ಕಂಡಿದ್ದೇವೆ. ರೆಡ್‌ಅಲರ್ಟ್ ಘೋಷಣೆ ಮಾಡಿದ ಮೇಲೆ ಮುಗಿಯುವುದೇ? ಕೆಲವೊಂದು ಸವಲತ್ತುಗಳನ್ನು ಕಲ್ಪಿಸಿದರೆ ನಮ್ಮ ಜವಾಬ್ದಾರಿಗಳು ಮುಗಿಯುವುದೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ನಮ್ಮದೇ ಜನರಿಗೆ ಪ್ರವಾಹದಂತಹ ಸಮಸ್ಯೆ ಬಂದಾಗ, ಅವರಿಗೆ ಹೆಗಲುಗೊಟ್ಟು ಎಲ್ಲಾ ಸ್ತರದಲ್ಲಿ ಎಲ್ಲಾ ಸಮಯದಲ್ಲಿ ಜೊತೆಯಲ್ಲಿರುವುದು, ಸಹಾಯ ಹಸ್ತವನ್ನು ಚಾಚುವುದು, ಒಂದು ಧರ್ಮದ ಆಡಳಿತವನ್ನು ಕೊಡಬೇಕಾದುದು ನಮ್ಮಕರ್ತವ್ಯ ಎಂದೆನಿಸುತ್ತಾ, "ರೆಡ್‌ಅಲರ್ಟ್"ಘೋಷಣೆ ಆದ ನಂತರ, ಮುಂದೇನು? ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವ ಪ್ರಯತ್ನ ಮಾಡಿದೆವು. ಅದಾಗಲೇ ನಮ್ಮಲ್ಲಿ ಹಲವು ಪ್ರಶ್ನೆಗಳು ಮೂಡಿದ್ದವು. ಅವುಗಳೆಂದರೆ, 1.ಯಾವ ಹಳ್ಳಿಗಳಿಗೆ ಆತಂಕತ್ಷಕಣವಿರುವುದು ? 2.ಯಾರೆಲ್ಲಾ ಮನೆ, ತೋಟಗಳನ್ನು ಖಾಲಿ ಮಾಡಬೇಕಾಗಬಹುದು? 3. ಯಾವ ಯಾವ ತೋಟವನ್ನು ಮನೆಯನ್ನು ಖಾಲಿ ಮಾಡಿಸಬೇಕು ? 4. ಯಾವಾಗ ಬಿಡಬೇಕು ? 5. ಎಲ್ಲಿಗೆ ಹೋಗಬೇಕು ? 6. ಹೇಗೆ ಹೋಗಬೇಕು ? 7.ಏನನ್ನು ತೆಗೆದುಕೊಂಡು ಹೋಗಬೇಕು ? ಜಾನುವಾರುಗಳನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎಂಬ ಹತ್ತು ಹಲವು ಪ್ರಶ್ನೆಗಳು ಶುರುವಾಗಿತ್ತು. ಇದನ್ನು ಹಾಗೆಯೇ ಬಿಟ್ಟಲ್ಲಿ ಈ ಗೊಂದಲಗಳಿಂದಲೇ ಇನ್ನಿತರ ದೊಡ್ಡ ದುಸ್ಥಿತಿಗಳು ಉಂಟಾಗುವ ಸಾಧ್ಯತೆ ಇತ್ತು.

ಹಲವಾರು ವಿಭಾಗಗಳು, ಹಲವಾರು ಇಲಾಖೆಗಳು, ಸಿಬ್ಬಂದಿಗಳು ತಮ್ಮತಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಆದರೆ ಅವರುಗಳೆಲ್ಲ ತಮ್ಮ ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಕಾರ್ಯವನ್ನು ನಿರ್ವಹಿಸುತ್ತಾರೆ. ಜನತೆಯ ರಕ್ಷಣೆಯ ನೇರ ಹೊಣೆ ಹೊತ್ತ ಪೊಲೀಸ್ ಇಲಾಖೆಯು ಇನ್ನೂ ಹೆಚ್ಚಿನ ಸವಾಲುಗಳನ್ನು ಮೆಟ್ಟಿ ನಿಂತು, ಅಪಾಯ, ದುರಂತಗಳ ಪರಿಸ್ಥಿತಿಗಳಲ್ಲಿ ಸೀಮಿತ ವ್ಯಾಪ್ತಿಯಿಂದ ಹೊರಬಂದು ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಂತ್ರಸ್ತ ಜನರಿಗೆ ಒಂದು ದಿಕ್ಕನ್ನು, ದೆಸೆಯನ್ನು ತೋರಿಸುವುದು, ಧೈರ್ಯವನ್ನು ತುಂಬಿ ಅವರನ್ನೆಲ್ಲ ನಡೆಸುವುದು ಒಂದು ದೊಡ್ಡ ಜವಾಬ್ದಾರಿಯಾಗಿತ್ತು. ಆದ್ದರಿಂದ ಹತ್ತು ಹಲವಾರು ಯೋಜನೆಗಳನ್ನು ಕೆಳಕಂಡಂತೆ ರೂಪಿಸಿಕೊಂಡು ಕಾರ್ಯಗತಗೊಳಿಸಿದೆವು. 1.ಮುಖ್ಯವಾಗಿ ಹಲವು ಕಡೆಗಳಿಂದ ಮಾಹಿತಿಗಳನ್ನು ಸಕಾಲಕ್ಕೆ ಕ್ರೋಢೀಕರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡೆವು. 2.ನಂತರ ಕೋಡಿಕೃತ ಮಾಹಿತಿಗಳನ್ನು ಬಳಸಿಕೊಂಡು ವಿಶ್ಲೇಷಿಸಿ ವ್ಯಾಪಕವಾದ ತಯಾರಿಗಳನ್ನು ಮಾಡಿದೆವು. 3.ಕೊನೆಯದಾಗಿ ಇವೆಲ್ಲವನ್ನು ಕಾರ್ಯಗತಗೊಳಿಸಿದೆವು. ಮಾಹಿತಿಗಳನ್ನು ನಾವು ನೀರಾವರಿ ಇಲಾಖೆ, ಡ್ಯಾಂಗಳ ಸಂಗ್ರಹ ವಿವರಣೆ, ಹವಾಮಾನ ಮುನ್ಸೂಚನೆ, ಜನರಿಂದ ಮಾಹಿತಿ, ಹಿಂದಿನ ಪ್ರವಾಹಗಳ ಇತಿಹಾಸ, ಭೂಪ್ರದೇಶದ ಭೌತಿಕ ವಿಷಯಗಳು








ಇತ್ಯಾದಿಗಳನ್ನು ಸಂಗ್ರಹಿಸಿದ್ದೆವು. ನಂತರರಕ್ಷಣಾ ಸಾಮಗ್ರಿಗಳ ಪರಿಶೀಲನೆ, ಸಂಗ್ರಹಣೆ, ಕಂಟ್ರೋಲ್ ರೂಮ್‌ಗಳ ಸ್ಥಾಪನೆ, ಎಲ್ಲರ ಜವಾಬ್ದಾರಿಗಳ ಹಂಚಿಕೆ, ನಿಯೋಜನೆ, ಸಾಮಗ್ರಿಗಳ ವಿತರಣೆ, ಸ್ಥಳಾಂತರಿಸುವುದು, ಪರಿಹಾರ ಕೇಂದ್ರಗಳ ಗುರುತಿಸುವಿಕೆ, ಪುನರ್‌ವಸತಿ ಇತ್ಯಾದಿಗಳ ಬಗ್ಗೆ ತಯಾರಿ ನಡೆಸಿದೆವು. ಕಡೆಯದಾಗಿ ಪೂರ್ವ ನಿರ್ಧರಿಸಿದ ಅನುಕ್ರಮಣಿಕೆಯಲ್ಲಿ ಸ್ಥಳಾಂತರಿಸುವುದನ್ನು, ರಕ್ಷಿಸುವುದನ್ನು, ಪರಿಹಾರ ವಿತರಿಸುವುದನ್ನು, ಪುನರ್ ವಸತಿ ಕಲ್ಪಿಸುವುದನ್ನು ಹಂತ ಹಂತವಾಗಿ ಮಾಡಿದೆವು. ಈ ರಚನೆಯಲ್ಲಿ ಈ ಎಲ್ಲ ಸಂಪೂರ್ಣ ವಿವರಗಳನ್ನು ಸ್ಫುಟವಾಗಿ ಕೊಡಲಾಗಿದೆ. ನಮ್ಮ ಪೊಲೀಸ ಸಿಬ್ಬಂದಿಗಳು ಎಲ್ಲಾ ಸಮಯದಲ್ಲಿ, ಸದಾಕಾಲ, ಎಲ್ಲಾ ಸ್ಥಳಗಳಲ್ಲಿ, ಎಂತಹುದೇ ಸ್ಥಿತಿಗಳಲ್ಲಿ ಉಪಸ್ಥಿತರಿರುತ್ತಾರೆ. ಇಲ್ಲಿ ಕೊಟ್ಟಿರುವಂತಹ ವಿವರಣೆಗಳಿಂದ ಯಾವುದೇ ತರಹದ ಪ್ರಾಕೃತಿಕ ವಿಕೋಪಗಳು ಮುಂದೆ ಎದುರಾದಾಗ ಕಾರ್ಯನಿರ್ವಹಿಸಲು ಅನುಕೂಲಕರವಾಗಿರುವುದು.

ಬರವಣಿಗೆಯನ್ನು ಪ್ರಾರಂಭಿಸಿದಾಗ ಇದೊಂದು ವರದಿಯ ರೂಪದಲ್ಲಿ ಇರಬೇಕೊ ಅಥವಾ ಕಥನದ ರೂಪದಲ್ಲಿ ಇರಬೇಕೊ ಎಂಬ ಆಯ್ಕೆಗಳ ಮಧ್ಯೆ ದ್ವಂದ್ವತೆ ಇದ್ದಿತ್ತು. ಕನ್ನಡದ ಭಾಷೆಯಲ್ಲಿ ಆಡಳಿತದ ಅನುಭವಗಳನ್ನು ಭಾಷೆಯ ಸಾಹಿತ್ಯದ ಹಿನ್ನೆಲೆಯಲ್ಲಿಯೂ ರಚಿಸಬೇಕಾಗಿರುವುದು ಅವಶ್ಯಕ. ಮತ್ತು ಮುಂದೆ ಇದನ್ನು ಉಪಯೋಗಿಸಿ ವಿಪತ್ತು ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಲು ನಮ್ಮ ಸಿಬ್ಬಂದಿಗಳ ದೃಷ್ಟಿಯಲ್ಲಿ ಸರಳವಾಗಿಡಲು ಸಹ ಅಷ್ಟೇ ಪ್ರಾಮುಖ್ಯತೆ ಕೊಡಬೇಕಾಗಿರುವುದು.

ಹೀಗೆ ನಾವು ನಾಲ್ಕು ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ಅನುಭವಗಳನ್ನು ವಿವರಿಸಿದ್ದೇವೆ.

1. ಮಾಹಿತಿ ಸಂಗ್ರಹ : ಹಲವಾರು ಮಾಹಿತಿಗಳು , ಹಲವಾರು ಜಾಗಗಳಲ್ಲಿ, ಹಲವಾರು ಜನರ ಬಳಿ ಇರುತ್ತವೆ. ಆದರೆ ಅವೆಲ್ಲವು ಅಲ್ಲಿಯೇ ಇರುತ್ತವೆ. ಎಂದಿನವರೆಗೂ ನಾವು ಇವುಗಳೆಲ್ಲವನ್ನು ಸಂಗ್ರಹಿಸುವುದಿಲ್ಲವೋ ಅಲ್ಲಿನವರೆಗೆ ನಿರ್ಣಯಗಳು ಪರಿಪೂರ್ಣವಾಗಿ ಬರುವುದಿಲ್ಲ. ಇಲ್ಲಿ ನಾವು ಮತ್ತು ಹತ್ತು ಹಲವಾರು ಸೂತ್ರಗಳಿಂದ ಮಾಹಿತಿಗಳನ್ನು ಸಂಗ್ರಹಣೆ ಮಾಡಿಕೊಂಡು ಅವುಗಳನ್ನು ನಿರಂತರವಾಗಿ ಬರುವಂತೆ ನೋಡಿಕೊಂಡೆವು. ಅವುಗಳನ್ನು ಹಲವಾರು ಇಲಾಖೆಗಳಿಂದ, ಹಲವಾರು ಜನರಿಂದ, ಇತಿಹಾಸಗಳಿಂದ, ನಕ್ಷೆಗಳಿಂದ ಮುಂತಾದವುಗಳಿಂದ ಸಂಗ್ರಹಿಸಿದೆವು.

2. ವಿಶ್ಲೇಷಣೆ : ನಮ್ಮಲ್ಲಿ ಮಾಹಿತಿ ಇದ್ದರೆ ಸಾಲದು. ಮಾಹಿತಿಗಳ ಸತ್ಯತೆ , ಪರಿಪೂರ್ಣತತೆ ಗಮನಿಸಬೇಕು. ಯಾವ ಮಾಹಿತಿ, ಯಾವ ಸಂದರ್ಭದಲ್ಲಿ ಉಪಯುಕ್ತವಾಗುತ್ತದೆ ಎಂಬುದನ್ನು ಗಮನಿಸಬೇಕು. ಎಲ್ಲದ್ದಕ್ಕಿಂತ ಮುಖ್ಯವಾಗಿ ಮಾಹಿತಿಗಳನ್ನು ಹಲವಾರು ಕೋನಗಳಿಂದ ವಿಶ್ಲೇಷಿಸಿದೆವು. ವ್ಯಾಪಕವಾದ ಮತ್ತು ಆಳವಾದ ವಿಶ್ಲೇಷಣೆಗೆ ಗಮನ ಕೊಟ್ಟೆವು.

3. ಸಂಘಟನೆ : ನಾವು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಿದೆವು. ಆದರೆ ಇಷ್ಟು ಮಾತ್ರ ಮಾಡಿದಲ್ಲಿ ಯಾವುದೇ ಉಪಯೋಗವಿಲ್ಲ . ಯಾಕೆಂದರೆ ಇವುಗಳನ್ನು ಕಾರ್ಯವಾಹಿಗೊಳಸುವುದು ಒಬ್ಬರಿಂದ ಸಾಧ್ಯವಿಲ್ಲ. ಸಂಘಟನೆ ಅವಶ್ಯಕವಾದದು ಆದ್ದರಿಂದ ನಮ್ಮೆಲ್ಲ ಸಿಬ್ಬಂದಿಗಳನ್ನು , ಅನ್ಯ ಇಲಾಖೆ ಸಿಬ್ಬಂದಿಗಳನ್ನು, ಸಾಮಾನ್ಯ ಜನತೆಯನ್ನು ನಾವು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದು ಮುಖ್ಯವಾಗಿರುವುದು. ಇವರೆಲ್ಲರ ಮನಸ್ಥಿತಿಗಳನ್ನು ನಾವು ತಿಳಿದುಕೊಂಡು ಇವರ ಸಾಮರ್ಥ್ಯವನ್ನು ಅರಿತುಕೊಂಡು, ಇವರಿಗೆಲ್ಲಾ ಕಾರ್ಯನಿರ್ವಹಣೆಗಳ ಬಗ್ಗೆ ಗಮನ ಹರಿಸುವಂತೆ ಮಾಡಿ ಮುನ್ನಡೆಯಬೇಕಾಗಿದ್ದು ಅವಶ್ಯಕ. ಒಂದು ಉತ್ತಮ ಸಂಘಟನೆ (Coordination), ಉತ್ತಮ ಫಲಿತಾಂಶ ಕೊಡುವುದು.

4. ಸಂವಹನ : ಮಾಹಿತಿ, ವಿಶ್ಲೇಷಣೆ, ಸಂಘಟನೆ ಎಲ್ಲ ಇರಬಹುದು ಆದರೆ ಅದನ್ನು ಸಂವಹಿಸುವುದು ಅಷ್ಟೇ ಮುಖ್ಯವಾದದು. ಯಾರಿಗೆ ಏನನ್ನು , ಯಾವಾಗಾ, ಎಷ್ಟನ್ನು ಹೇಳಬೇಕೆಂಬುದನ್ನು ಅನುಭವಗಳು ಹೇಳಿಕೊಡುತ್ತವೆ. ಸಂವಹನವು ಸರಿಯಾಗಿ ಮಾಡಬೇಕಾಗಿರುವುದು ಅಷ್ಟೇ ಅವಶ್ಯಕ. ಸಂವಹನವು ನಮ್ಮ ಸಿಬ್ಬಂದಿಗಳೊಂದಿಗೆ ಸಾಮಾನ್ಯವಾಗಿ ಭಾವನಾತ್ಮಕವಾಗಿರುವುದು ಮತ್ತು ಪರಿಣಾಮಕಾರಿಯಾಗಿರುವುದು. ಉಳಿದೆಲ್ಲಾ ಇಲಾಖೆಗಳೊಂದಿಗೆ, ಜನತೆಯೊಂದಿಗೆ, ಅವರುಗಳ ಮನಸ್ಸನ್ನು ಅರ್ಥಮಾಡಿಕೊಂಡು ಅಪಾರವಾದ










REDMI NOTE7 PRO
AI DUAL CAMERA



ತಾಳ್ಮೆಯಿಂದ ಇದ್ದು ಅವರುಗಳನ್ನೆಲ್ಲಾ ಒಪ್ಪಿಸಿ ಲಕ್ಷಾಂತರ ಜನರನ್ನು ಸುರಕ್ಷಿತವಾಗಿಡಬೇಕು. ಕೆಲವೊಂದು ಕಡೆ ಜನತೆಯು ಹೇಳುವುದನ್ನು ಕೇಳುವುದಿಲ್ಲ , ರಾಧ್ಧಾಂತವಾಗುವ ಸಂದರ್ಭಗಳಿರುತ್ತವೆ ಸೂಕ್ಷ್ಮವಾಗಿ ಅವರ ಮನಒಲಿಸಿ ನಿಭಾಯಿಸಬೇಕು. ಸಂವಹನಕ್ಕೆ ನಾವು, ರೇಡಿಯೋ, ಟಿ.ವಿ., ಸೈರನ್, ಪೊಲೀಸ ವಾಹನದ ಮೈಕಗಳು, ಮೊಬೈಲ್ ಫೋನ, ಮಾಧ್ಯಮದವರು ಮತ್ತು ಗಾಳಮಾತು ಹರಡುವುದು, ತಮಟೆ ಸಾರುವುದು ಮುಂತಾದವುಗಳನ್ನು ಹಲವು ಸಂದರ್ಭದಲ್ಲಿ ಬಳಸಿದ್ದೇವೆ.

ಹೀಗೆ ಮೇಲ್ಕಂಡ ನಾಲ್ಕು ನಿಟ್ಟಿನಲ್ಲಿ ಮುಂದುವರೆದು, ಕಾರ್ಯಪ್ರವೃತವಾದೆವು. ಕೃಷ್ಣಾ ನದಿ ಮತ್ತು ಅದರ ಉಪನದಿಗಳ ತೀರದಲ್ಲಿರುವ ಜಿಲ್ಲೆಗಳಾದ ಮಹಾರಾಷ್ಟ್ರದ ಕೋಲ್ಹಾಪುರ, ಸಾಂಗಲಿ, ಪುಣೆ, ಮಹಾಬಳೇಶ್ವರ, ಬೆಳಗಾವಿ, ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳ ಪೊಲೀಸ್ ಮತ್ತು ನೀರಾವರಿ ಇಲಾಖೆಯವರೊಂದಿಗೆ ಸಂಪರ್ಕವನ್ನು ಸಾಧಿಸಲಾಯಿತು.

ಕೃಷ್ಣಾ ನದಿ ಕೊಳ್ಳದಲ್ಲಿ ಸಾಕಷ್ಟು ಆಣೆಕಟ್ಟುಗಳಿದ್ದು, ಇವುಗಳಲ್ಲಿ 1.ಆಲಮಟ್ಟಿ ಆಣೆಕಟ್ಟು, 2.ನಾರಾಯಣಪುರ ಆಣೆಕಟ್ಟು, 3. ಕೋಯನಾ ಆಣೆಕಟ್ಟು ಪ್ರಮುಖವಾದವು. ಉಪನದಿಗಳಲ್ಲಿ ವೆನ್ನಾ, ಊರ್ಮಡಿ, ತರಳಿ, ಮಾಂಡ, ಕೊಯ್ನಾ, ಎರಲಾ, ವರ್ನಾ, ಮೋರ್ನಾರ, ಕಡವಿ, ಕಸರಿ, ಪಂಚಗಂಗಾ, ಕುಂಬಿ, ದಮನ, ತುಳಸಿ, ಬೋಗಾವತಿ, ದೂಧಗಂಗಾ, ವೇದಗಂಗಾ, ಚಿಕ್ಕೋತರಾ, ಹಿರಣ್ಯಕೇಶಿ, ಘಟಪ್ರಭಾ, ಮಾರ್ಕಂಡೇಯ, ಬಳ್ಳಾರಿ ನಾಲಾ, ಮಲಪ್ರಭಾ, ಹರತಳಾ ಮತ್ತು ನಂದಣಿ ಮುಖ್ಯವಾಗಿವೆ.

ಸಾಮಾನ್ಯವಾಗಿ ಹೆಚ್ಚಿನ ಮಳೆ ಬಂದಾಗ ಎಲ್ಲರೂ ನೋಡುವುದು ಮಹಾರಾಷ್ಟ್ರದಲ್ಲಿರುವ ಕೋಯ್ನಾ ಡ್ಯಾಂ ನಿಂದ ಎಷ್ಟು ನೀರು ಬಂದಿತು ಎಂದು. ಈ ಬಾರಿಯೂ ಕೇವಲ ಕೋಯ್ನಾ ಜಲಾಶಯ ನೋಡಿಕೊಂಡು ಕುಳಿತಿದ್ದಲ್ಲಿ ದೊಡ್ಡ ಅನಾಹುತವೇ ಆಗುತ್ತಿತ್ತು. ಈ ನದಿ ಪಾತ್ರದಲ್ಲಿ ಕೋಯನಾ ಜಲಾಶಯ ಮಾತ್ರವಲ್ಲದೇ ಇನ್ನೂ ಹಲವಾರು ಡ್ಯಾಂಗಳಿವೆ. ಅವುಗಳೆಂದರೆ ಕನೇರಡ್ಯಾಂ, ಊರ್ಮಡಿಡ್ಯಾಂ, ತರಳಿ ಡ್ಯಾಂ, ಉಟ್ಟೆಮಂಡಡ್ಯಾಂ, ಮೋರನಾಡ್ಯಾಂ, ವಾರನಾಡ್ಯಾಂ, ಕಡವಿ, ಗಾಜಾಪೂರಡ್ಯಾಂ, ಕೋಡೆಬುದ್ರುಕಡ್ಯಾಂ, ಗಂಗನಬವಡಾಡ್ಯಾಂ, ತುಳಸಿ ಡ್ಯಾಂ, ರಾಧಾನಗರಿಡ್ಯಾಂ, ಕಲಂಬಾಡಿಡ್ಯಾಂ, ಪಟಗಾವಡ್ಯಾಂ, ಚಿಕ್ಕೋತ್ರಾಡ್ಯಾಂ, ಹಿಡಕಲ್‌ಡ್ಯಾಂ, ನವಿಲುತೀರ್ಥಡ್ಯಾಂ ಮತ್ತು ಹಲವಾರು ಬ್ಯಾರೇಜಗಳಿವೆ. ಮುಖ್ಯವಾದ ಬ್ಯಾರೇಜಗಳೆಂದರೆ ಕಲ್ಲೋಳ ಬ್ಯಾರೇಜ, ಹಿಪ್ಪರಗಿ ಬ್ಯಾರೇಜ, ಪಡಸಲಗಿ ಬ್ಯಾರೇಜಗಳು. ಈ ಎಲ್ಲಾ ಡ್ಯಾಂಗಳ ನೀರಿನ ಜಲಾನಯನ ಕ್ಯಾಚ್‌ಮೆಂಟ್ ಪ್ರದೇಶಗಳು ಪಶ್ಚಿಮ ಘಟ್ಟದಲ್ಲಿದ್ದು, ಮಹಾಬಳೇಶ್ವರದಿಂದ ಕಣಕುಂಬಿ ತನಕ ಹರಡಿದೆ. ಇಲ್ಲೆಲ್ಲಾ ಹೆಚ್ಚಿನ ಮಳೆ ಬರುತ್ತಿದ್ದು ಕೇವಲ ಕೋಯ್ನಾದಿಂದ ಬಿಡುವ ನೀರಿನ ಆಧಾರದ ಮೇಲೆ ನಾವು ಕಾಯ್ದುಕೊಂಡು ನಿರ್ಣಯವನ್ನು ತೆಗೆದುಕೊಂಡಿದ್ದಲ್ಲಿ, ತಪ್ಪಾಗಿರುತ್ತಿತ್ತು.

ಆದ್ದರಿಂದ ಮೇಲೆ ಉಲ್ಲೇಖಿಸಿದ ಎಲ್ಲಾ ಪ್ರದೇಶಗಳ ನದಿಗಳ ನೀರಿನ ಮಟ್ಟ, ಒಳ ಹರಿವಿನ ಪ್ರಮಾಣ, ಡ್ಯಾಮಿನ ಹೊರಹರಿವಿನ ಪ್ರಮಾಣದ ಬಗ್ಗೆ ಮಾಹಿತಿಯನ್ನು ನಮ್ಮ ಪೊಲೀಸರಿಂದ ವ್ಯವಸ್ಥಿತವಾಗಿ ತರಿಸಲಾಯಿತು. ಅಲ್ಲಿನ ಡ್ಯಾಂಗಳಿಂದ ನೀರಿನ ಹೊರ ಹರಿವಿನ ಸಕಾಲಿಕ ವಾಸ್ತವಿಕ ಮಾಹಿತಿಯನ್ನು ತಿಳಿದುಕೊಳ್ಳುವ ವ್ಯವಸ್ಥೆ ಮಾಡಲಾಯಿತು. ಎರಡು ರಾಜ್ಯಗಳ ನದಿ ಪಾತ್ರದಲ್ಲಿರುವ ಎಲ್ಲಾ ತಾಲ್ಲೂಕಗಳಿಂದ ದೈನಂದಿನ ಮಳೆಯ ಪ್ರಮಾಣವನ್ನು ತಿಳಿದುಕೊಳ್ಳಲಾಯಿತು. ದೇಶದ ವಿಭಿನ್ನ ಟಿ.ವಿ. ಚಾನೆಲ್‌ಗಳಲ್ಲಿ ಬರುವ ಹವಾಮಾನದ ಮುನ್ಸೂಚನೆಗಳು, ವೆಬ್‌ಸೈಟಗಳಲ್ಲಿ ಇರುವ ಮುನ್ಸೂಚನೆಗಳನ್ನು ತಿಳಿದುಕೊಳ್ಳಲಾಯಿತು. ಜೊತೆ ಜೊತೆಯಲ್ಲಿಯೇ ಬೀಳುತ್ತಿರುವ ಮಳೆಯ ಪ್ರಮಾಣ ಮತ್ತು ನೀರಿನ ಹರಿವಿನ ರಭಸತೆಯನ್ನು ವಿವಿಧ ಸೂತ್ರಗಳಿಂದ ಕ್ರೋಢೀಕರಿಸಿಕೊಳ್ಳಲಾಯಿತು. ಇದರಿಂದ ಮುಂದೆ ಸಂಭವಿಸಬಹುದಾದ ಅನಾಹುತಗಳ ಸೂಚನೆಗಳನ್ನು ಕರಾರುವಕ್ಕಾಗಿ ಅಂದಾಜಿಸಲಾಯಿತು.

ನೀರಾವರಿ ಇಲಾಖೆಗಳಿಂದ ಸಿಗುವಂತಹ ಮಾಹಿತಿಗಳನ್ನು ಮತ್ತು ಕಾಡಾ (CADA) ವಿಭಾಗದಿಂದ ಬರುವ ಮಾಹಿತಿಗಳನ್ನು ಪಡೆದುಕೊಳ್ಳಲಾಯಿತು. ಕಂದಾಯ ಇಲಾಖೆಯಿಂದ ಹಳ್ಳಿಗಳ ಪಟ್ಟಣಗಳ ಸೂಚಿ, ಜನಸಂಖ್ಯೆಯ


10th Bn NDRF on 10th Aug 2019
Flood Rescue & Relief Ops








10th Bn NDRF on 10th Aug 2019
Flood Rescue & Relief Ops



ಸೂಚಿ ಇತ್ಯಾದಿಗಳನ್ನು ಪಡೆದುಕೊಳ್ಳಲಾಯಿತು. ಪೋಲೀಸ್ ಠಾಣೆಯಲ್ಲಿ ಉಪಲಬ್ಧವಿರುವ ಹಲವು ವಿಧದ ಫೀಲ್ಡ್‌ಕ್ರಾಫ್ಟ್ಸ್(Field-crafts) ನಕ್ಷೆಗಳು, ರಸ್ತೆಗಳ ನಕ್ಷೆ, ಪೋಲೀಸ್ ಬೀಟ್‌ಗಳ ಕಾರ್ಯವ್ಯಾಪ್ತಿ ನಕ್ಷೆಗಳನ್ನು ಗಮನಿಸಲಾಯಿತು. ಜೊತೆಯಲ್ಲಿ ಕೆಲವು ಹಳ್ಳಿಗಳ ಕೆಡ್ಯಾಸ್ಟರಲ್ ಮ್ಯಾಪ್, ನದಿ ಪಾತ್ರದ ಭೌತಿಕ ನಕ್ಷೆ ಮತ್ತು ಭೌಗೋಳಿಕ ನಕ್ಷೆಗಳ ಮೂಲಕ ನದಿ ತೀರದ ಪ್ರದೇಶಗಳ ಸ್ಥಿತಿಯ ಬಗ್ಗೆ ಅರಿತು ಕೊಳ್ಳಲಾಯಿತು. ಗೂಗಲ್ ಮ್ಯಾಪ್ಸ್‌ನಿಂದ ವಾಸ್ತವ ಅಂಶಗಳನ್ನು ಪರಿಗಣಿಸಲಾಯಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ (ISRO) ಕಡೆಯಿಂದ ಕೊಟ್ಟಂತಹ ಉಪಗ್ರಹ ಚಿತ್ರಗಳು, ಕರ್ನಾಟಕ ರಾಜ್ಯರಿಮೋಟ್ ಸೆನ್ಸಿಂಗ್‌ಆಪ್ಲಿಕೆಶನ್ ಸೆಂಟರ್ ಮತ್ತು ಕರ್ನಾಟಕರಾಜ್ಯ ವಿಪತ್ತು ನಿರ್ವಹಣ ಸಂಸ್ಥೆ, ಎನ್.ಆರ್.ಎಸ್.ಸಿ.ಯ, ಭುವನ್ ವೆಬ್‌ಸೈಟ್ ಮಾಹಿತಿ ಇತ್ಯಾದಿಗಳನ್ನು ಪಡೆದುಕೊಂಡು ಒಂದು ವಾಸ್ತವಿಕ (Realtime) ಮಳೆ ಮತ್ತು ಪ್ರವಾಹದ ಮಾನ ಚಿತ್ರಗಳನ್ನು ಮಾಡಿಕೊಂಡು ವಿಶ್ಲೇಷಿಸಿ, ಮುಳುಗಡೆಯಾಗುವಂತಹ ಪ್ರದೇಶಗಳನ್ನು ಗುರುತಿಸಲಾಯಿತು.

ಸಾರ್ವಜನಿಕ ವಲಯದಲ್ಲಿ ಇರುವ ವಾಟ್ಸ್‌ಆಪ್ ಗ್ರುಪ್‌ಗಳಲ್ಲಿ ಸಿಗುವಂತಹ ಮಾಹಿತಿಗಳು, ಮಹಾರಾಷ್ಟ್ರ ಮತ್ತು ಕರ್ನಾಟಕದ ಇಂಜೀನಿಯರ್‌ಗಳ ಗುಂಪಿನ ಮಾಹಿತಿಗಳು, ಪೋಲೀಸ್ ಸಿಬ್ಬಂದಿಗಳಿಂದ ಬಂದ ಮಾಹಿತಿಗಳು, ಹೀಗೆ ಮುಂತಾದವುಗಳ ಕಡೆಯಿಂದ ಸಿಗುವಂತಹ ಮಾಹಿತಿಗಳನ್ನು ನಿರಂತರವಾಗಿ ಕಲೆಹಾಕಿ ಅವುಗಳನ್ನು ವಿಶ್ಲೇ಼ಷಿಸಲು ವ್ಯವಸ್ಥೆ ಮಾಡಿಕೊಳ್ಳಲಾಯಿತು.

ನದಿಯ ಹರಿವಿನ ಪಾತ್ರದಲ್ಲಿ ಇರುವಂತಹ ಸೇತುವೆಗಳನ್ನು ಗುರುತಿಸಲಾಯಿತು. ಸೇತುವೆಗಳ ಬಳಿಯಿಂದ ನೀರಿನ ಹರಿವನ್ನು, ಪರಿಮಾಣವನ್ನು, ಹರಿವಿನ ವೇಗವನ್ನು, ತೀವ್ರತೆಯನ್ನು ಗಮನಿಸಲು ಸೂಕ್ತವಾಗಿರುವುದು. ತಕ್ಷಣವೇ ನಮಗೆ ಸಕಾಲಿಕ ಮಾಹಿತಿಯನ್ನು ಕೊಡಲು ನಮ್ಮ ಸಿಬ್ಬಂದಿಗಳನ್ನು ಅಲ್ಲಿ ನಿಯೋಜಿಸಲಾಯಿತು. ಸೇತುವೆಗಳ ಬಳಿಯಿಂದ ಕಾಣುವಂತಹ ನದಿಯ ಪಾತ್ರದಲ್ಲಿರುವ ಪಂಪ್‌ಹೌಸಗಳು, ಕಂಬಗಳು, ದೊಡ್ಡಮರಗಳು, ಬಂಡೆಗಳು ಇತ್ಯಾದಿಗಳನ್ನು ಗಮನಿಸಲಾಗುತಿತ್ತು. ಸಂಪೂರ್ಣ ಪ್ರದೇಶದಿಂದ ಬರುವಂತಹ ಎಲ್ಲಾ ಸಂಕ್ಷಿಪ್ತ ವಿವರಗಳನ್ನು ವಿಶ್ಲೇಷಿಸಿ, ಕರ್ನಾಟಕದ ಗಡಿಯ ಕಲ್ಲೋಳದಿಂದ ಹಿಡಿದು ಆಲಮಟ್ಟಿಯವರೆಗೆ ಏರುತ್ತಿರುವ ನೀರಿನ ಮಟ್ಟದ ಬಗ್ಗೆ ಒಂದು ಮಾನದಂಡದ ನೀಲನಕ್ಷೆ ಮಾಡಿಕೊಂಡು ಸಿಬ್ಬಂದಿಗಳಿಗೆ ತಿಳಿಸುವ ವ್ಯವಸ್ಥೆ ಮಾಡಲಾಯಿತು.

ಈ ಹಿಂದೆ 1979 ರಲ್ಲಿ 2,71,600 ಕ್ಯೂಸೆಕ್ಸ್, 1989 ರಲ್ಲಿ 3,02,600 ಕ್ಯೂಸೆಕ್ಸ್, 1994 ರಲ್ಲಿ 3,14,600 ಕ್ಯೂಸೆಕ್ಸ್, 2005 ರಲ್ಲಿ 4,40,000 ಕ್ಯೂಸೆಕ್ಸ್, 2008 ರಲ್ಲಿ 2,40,000 ಕ್ಯೂಸೆಕ್ಸ್‌ನಷ್ಟು ನೀರು ಹರಿದು ಕೃಷ್ಣಾ ನದಿಯಲ್ಲಿ ಪ್ರವಾಹವು ಬಂದು ಸಾಕಷ್ಟು ದುರಂತಗಳು ಸಂಭವಿಸಿದ್ದವು. ಪ್ರವಾಹ ಮತ್ತು ದುರಂತಗಳ ವ್ಯಾಪ್ತಿಯ ಬಗ್ಗೆ ನಕ್ಷೆಯನ್ನು ಮಾಡಿಕೊಳ್ಳಲಾಯಿತು. ಪ್ರವಾಹದ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳನ್ನು ಗುರುತಿಸಿ, ಆ ಹಳ್ಳಿಗಳ ಹಿರಿಯರಿಂದ ಆ ವರ್ಷಗಳಲ್ಲಿ ಆದ ಮುಳುಗಡೆ, ನಷ್ಟಗಳು, ಸ್ಥಳಾಂತರಗಳು, ಆದ ಸಮಸ್ಯೆಗಳ ಬಗ್ಗೆ ಅವರಿಗೆ ಜ್ಞಾಪಕ ಇದ್ದಷ್ಟು ತಿಳಿದುಕೊಳ್ಳಲಾಯಿತು. ಅಂದಿನ ಪರಿಸ್ಥಿತಿಗಳ ಬಗ್ಗೆ ಮತ್ತು ನಿರ್ವಹಣೆಗಳ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಲಭ್ಯವಿರಲಿಲ್ಲ. ಇತಿಹಾಸ ತಿಳಿಯದೇ ಭವಿಷ್ಯದ ಯೋಜನೆ ಮಾಡುವುದು ಕಷ್ಟ. 2019 ರಲ್ಲಿ ದೊಡ್ಡ ಪ್ರವಾಹವು ಬಂದು ಕೃಷ್ಣೆಯಲ್ಲಿ 5,23,000 ಕ್ಯೂಸೆಕ್ಸ್ ನೀರು ಹರಿಯಿತು. ಘಟಪ್ರಭಾದಲ್ಲಿ 2,14,000 ಕ್ಯೂಸೆಕ್ಸ್ ನೀರು ಹರಿಯಿತು. ಮಲಪ್ರಭಾದಲ್ಲಿಯೂ 94,000 ಕ್ಯೂಸೆಕ್ಸ್ ನೀರು ಹರಿಯಿತು. ಆದ್ದರಿಂದ ಒಂದು ಲಿಖಿತ ದಾಖಲೆ ಮತ್ತು ನೆನಪುಗಳನ್ನು ಪೋಲೀಸರಲ್ಲಿ ಇಡುವುದು ಅವಶ್ಯಕ ಎಂದೆನಿಸತೊಡಗಿತು.

ನಮ್ಮ ಹಿರಿಯ ಸ್ಥಳೀಯ ಸಿಬ್ಬಂದಿಗಳಿಂದ, ಹಿಂದೆ ಪ್ರವಾಹದಿಂದ ಆದ ಅನಾಹುತಗಳ ಬಗ್ಗೆ, ಸವಾಲುಗಳ ಬಗ್ಗೆ, ಕೊರತೆಗಳ ಬಗ್ಗೆ ತಿಳಿದುಕೊಳ್ಳಲಾಯಿತು. ಪ್ರತಿ ಹಳ್ಳಿಯ ಸಿಬ್ಬಂದಿಗಳನ್ನು ಗುರುತಿಸಿ ಅವರೊಂದಿಗೆ ವಿಚಾರ ವಿಮರ್ಶಿಸಲಾಯಿತು. ಈ ಹಿಂದಿನ ಪ್ರವಾಹದಲ್ಲಿ ಕೆಲವು ಹಳ್ಳಿಗಳಲ್ಲಿ ದೇವಸ್ಥಾನಗಳ ಮೇಲೆ ಮನೆಗಳ ಮೇಲೆ,




Z 2579





ಬಸ್‌ಸ್ಟಾಪ್‌ಗಳ ಮೇಲೆ ಕೆಂಪು ಬಣ್ಣದಿಂದ ನೀರಿನ ಮಟ್ಟವನ್ನು ಚಿಹ್ನೆ ಸಹಿತ ಗುರುತು ಮಾಡಲಾಗಿತ್ತು. ಈ ನದಿ ಪಾತ್ರಗಳಲ್ಲಿ ಪ್ರಯಾಣಿಸಿದಾಗ ಸಾಕಷ್ಟು ಮಾಹಿತಿಗಳು ಪ್ರದೇಶದ ಹಲವು ವರ್ಗಗಳಲ್ಲಿ, ಹಲವು ಜನರ ಜ್ಞಾನದಲ್ಲಿತ್ತು. ಅವುಗಳನ್ನು ಸಮಗ್ರವಾಗಿ ಅಧ್ಯಯಿಸಿದೆವು.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಬರುತ್ತಿರುವಂತಹ ಮಳೆ ಮತ್ತು ಪ್ರವಾಹ ಒಂದು ಕ್ಲಿಷ್ಟಕರವಾದ ಸಮಸ್ಯೆಯನ್ನು ತಂದೊಡ್ಡುವುದನ್ನು ಕಂಡೆವು. ಹಲವು ಸೂತ್ರಗಳಿಂದ ಪಡೆದುಕೊಂಡ ಮಾಹಿತಿಗಳನ್ನು / ದತ್ತಾಂಶಗಳನ್ನು ವಿಂಗಡಿಸಿ, ಅವುಗಳನ್ನು ವಿಶ್ಲೇಷಿಸಿ ಕ್ವಾಂಟಮ್ ಕಂಪ್ಯೂಟಿಂಗ್ (Quantum Computing) ಎಂಬ ತತ್ವವನ್ನು ಅಳವಡಿಸಿ, ಒಂದು ಸ್ಥೂಲ ರೂಪದಲ್ಲಿ ಆಗಬಹುದಾದ ಅನಾಹುತದ ಬಗ್ಗೆ, ದೂರದೃಷ್ಟಿಯಿಂದ ಮುಂಚಿತವಾಗಿ ಅಂದಾಜಿಸಲಾಯಿತು. ಈ ಜಟಿಲ ಸಮಸ್ಯೆಯನ್ನು ಅರಿತು ಅದನ್ನು ಸರಳವಾಗಿ ನಿರ್ವಹಿಸಲು ಕೆಲವು ಮಾದರಿಗಳನ್ನು ತಯಾರಿಸಿಕೊಂಡೆವು. ಹೀಗೆ ಹಳೆಯ ದತ್ತಾಂಶಗಳು ಮತ್ತು ಹೊಸ ದತ್ತಾಂಶಗಳು ಎಲ್ಲವನ್ನು ಕಲೆಹಾಕಿ, ಜೋಡಿಸಿಕೊಂಡು, ವಿಂಗಡಿಸಿ, ವಿಶ್ಲೇಷಿಸಿ ಭವಿಷ್ಯದಲ್ಲಿ ಸಂಭವಿಸುವ ಅನಾಹುತದ ಬಗ್ಗೆ ತಿಳಿದುಕೊಳ್ಳಲಾಯಿತು. ಹೀಗೆ ಒಂದು ಪ್ರೆಡಿಕ್ಟಿವ್ ಅನಾಲೈಸಿಸ್ (Predictive Analysis) ಮಾಡಿಕೊಂಡು, ಬರಬಹುದಾದಂತಹ ಪ್ರವಾಹದಲ್ಲಿ, ಯಾವುದೇತರಹದ ಗೊಂದಲವಿಲ್ಲದೇ, ನಷ್ಟವಿಲ್ಲದೇ, ಸಾವುಗಳಿಲ್ಲದೇ ತ್ವರಿತವಾಗಿ ಜನತೆಯನ್ನು ಸ್ಥಳಾಂತರಿಸಿ, ರಕ್ಷಣೆ ಮಾಡಲು ನಾವು ವಿಶ್ಲೇಷಣೆ ಮಾಡಿದ ಅನುಕ್ರಮಣಿಕೆಯಲ್ಲಿಯೇ ಹಳ್ಳಿಗಳ ಜನರನ್ನು ಸ್ಥಳಾಂತರ ಮಾಡಲು ನಿರ್ಧರಿಸಿದೆವು.

ಇದೇ ಸಂದರ್ಭದಲ್ಲಿ ಮತ್ತೊಂದು ಕಡೆ ಕಾರ್ಯಾಲಯದ ಸಿಬ್ಬಂದಿ, ಜಿಲ್ಲಾ ಪೊಲೀಸ್, ಜಿಲ್ಲಾ ಸಶಸ್ತ್ರ ಪಡೆ, ರಾಜ್ಯ ಸಶಸ್ತ್ರ ಪಡೆ, ಗೃಹ ರಕ್ಷಕ ದಳ, ಅಗ್ನಿ ಶಾಮಕ ದಳ, ರಾಜ್ಯ ವಿಪತ್ತು ನಿರ್ವಾಹಣಾ ದಳಗಳೊಂದಿಗೆ ಇರುವ ಸಂಪನ್ಮೂಲಗಳನ್ನು ತಿಳಿದುಕೊಳ್ಳಲಾಯಿತು. ಪೊಲೀಸ್ ಉನ್ನತಾಧಿಕಾರಿಗಳೊಂದಿಗೆ ಸಮಾಲೋಚಿಸಲಾಯಿತು.

ಜಿಲ್ಲೆಯ ವಿಪತ್ತು ನಿರ್ವಹಣಾ ವಿಭಾಗದಲ್ಲಿರುವ ಮಾಹಿತಿಯನ್ನು ಮತ್ತು ರಕ್ಷಣೆಗೆ ಬೇಕಾದ ಸಂಪನ್ಮೂಲಗಳನ್ನು ಪಡೆಯಲಾಯಿತು. ಜಿಲ್ಲೆಯ ಅನ್ಯ ವಿಭಾಗಗಳಿಂದ ಆಗಬಹುದಾದ ಸೇವೆಗಳ ಬಗ್ಗೆ ಜಿಲ್ಲಾ ಸ್ತರದಲ್ಲಿ ಸಂಬಂಧಪಟ್ಟವರೊಂದಿಗೆ ವಿವೇಚಿಸಿ ಮಾಡಬೇಕಾದ ತಯಾರಿಗಳ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಲಾಯಿತು.

ಪೊಲೀಸ್ ಠಾಣೆಗಳಲ್ಲಿ ಪ್ರವಾಹ ಕಂಟ್ರೋಲ್ ರೂಮ್‌ಗಳನ್ನು ಸ್ಥಾಪಿಸಲಾಯಿತು. ಎಲ್ಲಾ ವಿಭಾಗಗಳ ನಿಯೋಜನೆಗೆ ಸಂಬಂಧಪಟ್ಟಂತೆ ಮಾಹಿತಿಗಳನ್ನು, ಸಂಪರ್ಕ, ಸಾಧನ, ಸಲಕರಣೆ, ಮಾಡಬೇಕಾದ ಕರ್ತವ್ಯ, ತೆಗೆದುಕೊಳ್ಳಬೇಕಾದ ರಸ್ತೆ, ಪರಿಹಾರ ಕೇಂದ್ರಗಳು, ಅದರಲ್ಲಿರಬೇಕಾದ ಅವಶ್ಯಕ ವಸ್ತು ಸಾಮಗ್ರಿಗಳು, ಅಲ್ಲಿರಬೇಕಾದ ಜವಾಬ್ದಾರಿಯುತ ಸಿಬ್ಬಂದಿಗಳನ್ನು ನಿರ್ಣಯಿಸಿ ಲೋಕಲ್ ಕಂಟ್ರೋಲ್ ರೂಮ್‌ಗಳನ್ನು ಪರಿಣಾಮಕಾರಿಯಾಗಿ ಮಾಡಲಾಯಿತು. ಸಿಬ್ಬಂದಿಗಳ ರಜೆಯನ್ನು ರದ್ದು ಮಾಡಿ ತುರ್ತು ಸೇವೆಗಾಗಿ ವಾಪಸ್ಸು ಕರೆಸಲಾಯಿತು.

ಹೆಚ್ಚುವರಿ ಸಿಬ್ಬಂದಿಗಳನ್ನು, ವಾಹನಗಳನ್ನು, ಜೀವರಕ್ಷಕ ಸಾಮಗ್ರಿಗಳಾದ ಹಗ್ಗ, ಟ್ಯೂಬ್ಸ್, ಹಗ್ಗದ ಮಂಚ, ಬ್ಯಾಟರಿ, ಡ್ರ್ಯಾಗನ್ ಲೈಟ್ಸ್, ವಾಯರ್‌ಲೆಸ್ ಸೆಟ್, ರೇನ್‌ಕೋಟ್ಸ್ ಮುಂತಾದವುಗಳನ್ನು ನೀರಿನ ಪಾತ್ರದಲ್ಲಿರುವ ಠಾಣೆಯ ಸಿಬ್ಬಂದಿಗಳಿಗೆ, ವಲಯದಿಂದ ಹಂಚಲಾಯಿತು. ನುರಿತ ಈಜುಗಾರರನ್ನು ಗುರುತಿಸಿ ಅವರುಗಳನ್ನು ಸಹ ಎಲ್ಲ ಪ್ರಾಂತ್ಯಗಳಲ್ಲಿ ಸಮಾನವಾಗಿ ಕಳುಹಿಸಲಾಯಿತು. ಜಿಲ್ಲೆಯಲ್ಲಿ ಉಪಲಬ್ಧವಿರುವ ಸರಕಾರಿ ಬಂದರು ಮತ್ತು ಒಳನಾಡು ಜಲಸಾರಿಗೆಯ ಬೋಟ್‌ಗಳು, ಪೊಲೀಸ್‌ಬೋಟ್‌ಗಳು, ಖಾಸಗಿ ಮೀನುಗಾರರ ಬೋಟ್‌ಗಳನ್ನು ಗುರುತಿಸಿ ಅವುಗಳೊಂದಿಗೆ ಪ್ರತ್ಯೇಕವಾಗಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ತಯಾರಿ ಸ್ಥಿತಿಯಲ್ಲಿ ನಿಯಂತ್ರಣದಲ್ಲಿಡಲಾಯಿತು.

FORECAST BY IMD FOR UPPER CATCHMENT AREA OF KRISHNA BASIN IN MAHARASTRA
FORECAST BY IMD FOR UPPER CATCHMENT AREA OF KRISHNA BASIN IN KARNATAKA
FORECAST FOR NORTH INTERIOR KARNATAKA, STATE NATURAL DISASTER MANAGEMENT CENTRE.
RAINFALL DATA FROM THE RAIN GUAGE CENTRES OF MAHARASTRA
RAINFALL DATA FROM THE RAIN GUAGES CENTRES IN KARNATAKA
DOORDARSHAN FORECAST
ISRO SATELLITE IMAGES
RAINFALL VISIBILITY REPORT FROM POLICEMEN ON THE GROUND
RAINFALL INTENSITY REPORT FROM POLICEMEN ON THE GROUND
VISIBILITY REPORT OF THE SPEED OF WATER FLOW IN RIVER STREAM FROM POLICEMEN ON THE GROUND
VISIBLE REPORT OF LEVEL OF WATER IN THE STREAMS AS SEEN ON WATER PUMP HOUSES ALONG THE RIVER BANK FROM POLICEMEN ON THE GROUND
VISIBLE REPORT OF OLD LEVEL MARKINGS ON THE BUILDINGS ETC. OF THE EARLIER HIGH FLOOD LEVEL OF 2005 FROM POLICEMEN ON THE GROUND

OBSERVATION OF MAHARASTRA RAIN GUAGES
KOYANA
WARANA
MAHABALESHWAR
NAVAAJA
KOLAPUR
RADHANAGARI
SANGLI
DOODHGANGA

DISTRICTWISE RAINFALL DEPARTURE FROM NORMAL (AUGUST 1 TO 11th 2019)			
	NORMAL RAINFALL (MM)	ACTUAL RAINFALL (MM)	**PERCENTAGE DEPARTURE**
BELAGAAVI	63	351	**458**
BAGALKOTE	27	45	**70**
GADAG	31	80	**155**
DHARWAD	46	315	**586**
VIJAYAPURA	29	19	**-34**

RAINFALL DATA FROM THE RAIN GUAGE CENTRES IN KARNATAKA

BELAGAVI - RAINFALL BETWEEN AUGUST 1st TO 10th (MM)			
TALUKAS	NORMAL	ACTUAL	**PERCENTAGE EXCESS**
ATHANI	21	75	**255**
BAILHONGAL	63	401	**534**
BELAGAVI RURAL	132	674	**412**
CHIKODI	36	301	**731**
GOKAK	21	153	**634**
HUKKERI	38	354	**832**
KAANAPUR	192	1062	**454**
RAMADURGA	19	80	**313**
RAIBAGA	22	134	**516**
SAVADATTI	24	163	**593**
BELAGAVI	58	342	**490**

DHARWAD - RAINFALL BETWEEN AUGUST 1 ST TO 10 TH			
TALUKAS	NORMAL	ACTUAL	**PERCENTAGE EXCESS**
DHARWADA	127	525	**314**
HUBLI	85	343	**303**
KALGATGI	170	515	**204**
KUNDGOL	91	260	**185**
NAVALGUND	65	181	**180**

NORTH INTERIOR KARNATAKA RAINFALL DEPARTURE FROM NORMAL (AUGUST 1 TO 11th 2019)		
NORMAL RAINFALL (MM)	ACTUAL RAINFALL (MM)	**PERCENTAGE EXCESS**
48	118	**148**

ಈ ಎಲಾ ತಯಾರಿಯೊಂದಿಗೆ ಜಿಲ್ಲಾ ಆಡಳಿತವನ್ನು ಸಚೇತಗೊಳಿಸಿ ಹೆಚ್ಚುವರಿ ವ್ಯವಸ್ಥೆಯನ್ನು ಮಾಡಿಕೊಳ್ಳಲಾಯಿತು. ವಿಶೇಷವಾಗಿ ಉತ್ತರ ವಲಯದ ಪೊಲೀಸ ಭವನದಲ್ಲಿ ಪ್ರವಾಹ ಮಾಸ್ಟರ್ ಕಂಟ್ರೋಲ್ ರೂಮ್‌ನ್ನು ಸ್ಥಾಪಿಸಲಾಯಿತು. ಸಮಸ್ತ ಆಗುಹೋಗುಗಳನ್ನು ನಿರ್ಣಯಗಳನ್ನು, ಅನ್ಯ ಇಲಾಖೆಗಳೊಂದಿಗೆ ಸಂವಹನ, ಸಿಬ್ಬಂದಿಗಳೊಂದಿಗೆ ವಿಚಾರ ವಿಮರ್ಶೆ, ತೆಗೆದುಕೊಳ್ಳಬೇಕಾದ ಕ್ರಮಗಳು, ನಿರ್ದೇಶನಗಳನ್ನು ಕೊಡುವುದು ಮತ್ತು ಅದರ ಪಾಲನೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು, ಅವಶ್ಯಕ ಬದಲಾವಣೆಗಳನ್ನು ಮಾಡುವುದು. ಯೋಜನೆಗಳನ್ನು ಕಾರ್ಯರೂಪ ಗೊಳಿಸುವುದು, ತುರ್ತುಕ್ರಮಗಳ ಅನುಕ್ರಮಣಿಕೆ, ಸುರಕ್ಷೆಯ ಅನುಕರಣಿಕೆ ಇತ್ಯಾದಿಗಳ ಕರ್ತವ್ಯಗಳನ್ನು ನೇರವಾಗಿ ಪೊಲೀಸ್ ಮಹಾನಿರೀಕ್ಷಕರ ಸ್ತರದಲ್ಲಿ ನೋಡಿಕೊಂಡೆವು.

ಇವಲ್ಲದೇ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್, ಜಿಲ್ಲಾಧಿಕಾರಿಗಳ ಕಂಟ್ರೋಲ್ ರೂಮ್, ತಹಶೀಲ್ದಾರ ಕಂಟ್ರೋಲ್ ರೂಮ್, ಠಾಣಾಧಿಕಾರಿಗಳ ಕಂಟ್ರೋಲ್ ರೂಮ್, ಏರ್‌ಪೋರ್ಟ ಕಂಟ್ರೋಲ್ ರೂಮ್, ವಿವಿಐಪಿ ಕಂಟ್ರೋಲ್ ರೂಮ್, ಪರಿಹಾರ ವಿತರಣೆ ಕಂಟ್ರೋಲ್ ರೂಮ್ ಪ್ರವಾಹ ಪರಿಸ್ಥಿತಿ ನಿಯಂತ್ರಣಕ್ಕಾಗಿ ಹಲವು ನಿರ್ದಿಷ್ಟ ಕಂಟ್ರೋಲ್ ರೂಮ್‌ಗಳನ್ನು ದಿನದ 24 ಗಂಟೆಗಳು ನಡೆಯುವಂತೆ ಸ್ಥಾಪಿಸಲಾಯಿತು. ಈ ಎಲ್ಲಾ ಕಂಟ್ರೋಲ್ ರೂಮ್‌ಗಳಲ್ಲಿ ಇವೆಲ್ಲವುಗಳ ಮಾಹಿತಿ ಎಲ್ಲರ ಬಳಿ ಇರುವಂತೆ ನೋಡಿಕೊಳ್ಳಲಾಯಿತು. ಜೊತೆಗೆ ನಾವುಗಳು ತೆಗೆದುಕೊಂಡ ನಿರ್ಣಯಗಳನ್ನು, ನಿರ್ದೇಶನಗಳನ್ನು ಜಾರಿ ತರಲು ಮಾಡಬೇಕಾದ ಎಲ್ಲಾ ಕೆಲಸ, ಬೇಕಾದ ಎಲ್ಲ ಸಲಕರಣೆ, ಮಾಹಿತಿಗಳನ್ನು ಕೊಟ್ಟು ಧೃಢ ಪಡಿಸಲಾಯಿತು. ಹಾಗೆಯೇ ಮಾನ್ಯ ಮಂತ್ರಿಗಳು, ಶಾಸಕರು, ಜಿಲ್ಲಾ ಪರಿಷತ್, ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಲಾಯಿತು. ತಾಲೂಕುಗಳಲ್ಲಿರುವ ಮಾಧ್ಯಮ ವರ್ಗದವರೊಂದಿಗೆ, ವಾಟ್ಸಪ್ ಗ್ರೂಪ್‌ಗಳೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳಲು ಸ್ಥಳೀಯ ಸಿಬ್ಬಂದಿಗಳಿಗೆ ಸೂಚಿಸಲಾಯಿತು. ಮತ್ತು ಎಲ್ಲಾ ವಿಧದ ಎಚ್ಚರಿಕೆಗಳ ಬಗ್ಗೆ, ವ್ಯವಸ್ಥೆಗಳ ಬಗ್ಗೆ, ಸ್ಥಳಾಂತರದ ಬಗ್ಗೆ, ಪರಿಹಾರ ಕೇಂದ್ರಗಳ ಬಗ್ಗೆ, ಸಿಬ್ಬಂದಿಗಳ ಬಗ್ಗೆ ಇರಬಹುದಾದಂತಹ ಸೂಚನೆ, ನಿರ್ದೇಶನಗಳು ಮಾಡಬೇಕಾದಂತಹ ಕರ್ತವ್ಯಗಳ ಬಗ್ಗೆ ಮಾಹಿತಿಗಳನ್ನು ಜನತೆಯೊಂದಿಗೆ ಸಕಾಲದಲ್ಲಿ ಹಂಚಿಕೊಳ್ಳಲು ವ್ಯವಸ್ಥೆ ಮಾಡಲಾಯಿತು.

ಜುಲೈ 27–28 ರಷ್ಟರಲ್ಲಿ ಮೇಲೆ ಕಂಡಂತಹ ಎಲ್ಲ ಮುಂಜಾಗ್ರತಾ ವ್ಯವಸ್ಥೆಗಳನ್ನು ಮಾಡಿಕೊಂಡು ಧಾರಾಕಾರವಾಗಿ ಸುರಿವ ಮಳೆಯ ಪ್ರಮಾಣ ಮತ್ತು ನದಿಯಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಯಾವ ಯಾವ ಹಳ್ಳಿಗಳ ಜನರನ್ನು ಯಾವಾಗ, ಎಷ್ಟು ನೀರು ಬಂದಾಗ, ಹೇಗೆ, ಎಲ್ಲಿಗೆ ಸ್ಥಳಾಂತರಿಸಬೇಕು ಇತ್ಯಾದಿಗಳ ಬಗ್ಗೆ ಒಂದು ಪ್ರೆಡಿಕ್ಟಿವ್ ಅನಾಲೈಸಿಸ್ (Predictive Analysis) ಮೂಲಕ ಸೂಚ್ಯ ಬದ್ಧವಾಗಿ ತಯಾರಿಸಿ ಇಡಲಾಯಿತು. ಎಲ್ಲರೂ ಒಗ್ಗಟ್ಟಾಗಿ ಪ್ರವಾಹದ ಆಗುಹೋಗುಗಳನ್ನು ಎದುರಿಸಲು ಸಜ್ಜಾದೆವು.

ನಾವುಗಳು ವಿಶ್ಲೇಷಣೆ ಮಾಡಿದ ಅನುಕ್ರಮಣಿಕೆಯಲ್ಲಿಯೇ ಜನತೆಯನ್ನು ಸ್ಥಳಾಂತರ ಮಾಡಬೇಕೆಂಬುದನ್ನು ನಿರ್ಣಯಿಸಿ ಎಲ್ಲ ಸಿಬ್ಬಂದಿಗಳನ್ನು ಕೂಡಿಸಿ ಪ್ರವಾಹದ ಸಮಸ್ಯೆಯ ನಿರ್ವಹಣೆ ನಮ್ಮೆಲ್ಲರಿಗೂ ಒಂದು ಜವಾಬ್ದಾರಿ ಎಂದು ಮನವರಿಕೆ ಮಾಡಿಕೊಟ್ಟೆವು. ಜುಲೈ 29 ರಿಂದ ಹಲವು ಕಡೆಗಳಲ್ಲಿ ನಿಯೋಜಿಸಿದ ಸಿಬ್ಬಂದಿಗಳಿಂದ ನಿಯಮಿತವಾಗಿ ಮತ್ತು ಹಂತ ಹಂತವಾಗಿ ಸಕಾಲಿಕ ವಸ್ತುನಿಷ್ಠ ಮಾಹಿತಿಯು ಬರತೊಡಗಿತು. ಇರುವ ನದಿಯ ರೌದ್ರತೆ ಮತ್ತು ನಾವು ಮಾಡಬೇಕಾದ ಕರ್ತವ್ಯ ಎಲ್ಲರನ್ನೂ ಎಚ್ಚರಿಸಿತ್ತು. ರಾಜ್ಯ ಸರಕಾರಕ್ಕೆ ಸೂಚನೆಯನ್ನು ಕಳುಹಿಸಲಾಯಿತು. ವಿಪತ್ತು ನಿರ್ವಹಣಾ ವಿಭಾಗಗಳಿಗೆ ಹೆಚ್ಚುವರಿ ರಕ್ಷಣಾ ಸಾಮಗ್ರಿ, ಮೋಟಾರ ರ್‍ಯಾಫ್ಟ್ ಬೋಟ್‌ಗಳ ವ್ಯವಸ್ಥೆಗಳ ಬಗ್ಗೆ ಗಮನವನ್ನು ಸೆಳೆಯಲಾಯಿತು. ನದಿಯಿಂದ ಮೊದಲು 2 ಕಿ.ಮೀ ತನಕ ಇರುವ ಬಫ್ ರ್ ಝೋನ ಹಳ್ಳಿಗಳನ್ನು ಗುರುತಿಸಿ ಅಲ್ಲಿ ಜನತೆಗೆ ಪೊಲೀಸ್ ವಿಭಾಗದಿಂದ ಸೂಚನೆಯನ್ನು ಕಳುಹಿಸಲಾಯಿತು.

ದಿನಾಂಕ: 01.08.2019 ರ ತನಕವು ಕೋಯ್ನಾ ಜಲಾಶಯದಿಂದ ನೀರನ್ನು ಬಿಟ್ಟಿರಲಿಲ್ಲ. ಈ ಬಾರಿ








ನಾವು ನಮ್ಮ ಗಮನವನ್ನು ಮಹಾರಾಷ್ಟ್ರದ 14 ಹಲವು ಆಣೆಕಟ್ಟುಗಳ ಮೇಲೆ ನಿರಂತರವಾಗಿ ಇಟ್ಟಿದೆವು. ಅಲ್ಲಿ ಒಂದು ವೇಳೆ ನೀರು ಬಿಟ್ಟಲ್ಲಿ ನಮ್ಮ ಕರ್ನಾಟಕದ ಗಡಿಗೆ ಬರಲು ಸರಿಸುಮಾರು 12 ಗಂಟೆಗಳು ಬೇಕಾಗುತ್ತದೆ. ಎಲ್ಲಾ ಡ್ಯಾಮ್‌ಗಳಿಂದ ನೀರು ಬಿಟ್ಟಲ್ಲಿ ನಮ್ಮ ಕರ್ನಾಟಕದ ಗಡಿಗೆ ನೀರು ಇನ್ನೂ ಬಹಳ ಬೇಗ ತಲುಪುವುದು. ಆದ್ದರಿಂದ ಆ ದಿನದ 10–12 ಗಂಟೆಗಳ ಸೀಮಿತ ಅವಧಿಯಲ್ಲಿ (window period) ನಮಗೆ ಜನತೆಯನ್ನು ರಕ್ಷಿಸಲು ಅವಕಾಶ ಸಿಗುತ್ತದೆ. ಮಹಾರಾಷ್ಟ್ರದಿಂದ ಡ್ಯಾಮ್‌ಗಳು ತುಂಬಿದ ಮೇಲೆ ಅವರು ಹಂತ ಹಂತವಾಗಿ ನೀರನ್ನು ಹೆಚ್ಚಿಸುತ್ತಾ ಬಿಡುವರು. ಅಲ್ಲಿನ ಎಲ್ಲ ಅಧಿಕಾರಿಗಳು ನಮ್ಮೊಂದಿಗೆ ಸಂಪರ್ಕದಲ್ಲಿದ್ದರು. ಡ್ಯಾಮ್‌ಗಳು ತುಂಬಲು ಇನ್ನೂ 4–5 ದಿನಗಳು ಬೇಕಾಗುತ್ತದೆ ಎಂದು ಎಲ್ಲರೂ ಊಹಿಸಿದ್ದರು. ಆದರೆ ಕೋಯ್ನಾದ ಹಿನ್ನೀರಿನಲ್ಲಿ ಲಘುವಾದ ಭೂಕಂಪವಾಗಿ ಅಲ್ಲಿನ ಅಧಿಕಾರಿಗಳು ತುರ್ತು ಸಭೆಯನ್ನು ಕರೆದು ಆಗಸ್ಟ 2 ನೇ ತಾರೀಖಿನಿಂದಲೇ ಹೆಚ್ಚಿನ ನೀರನ್ನು ಬಿಡುವುದಾಗಿ ತಿಳಿಸಿದರು. ಆ ದಿನ ನಮ್ಮ ಎಲ್ಲ ಸಿಬ್ಬಂದಿಯವರನ್ನು ಜೊತೆಯಲ್ಲಿ ಕರೆದು, ಅಲರ್ಟ್‌ನಲ್ಲಿಟ್ಟು ಮುಳುಗಡೆಯಾಗುವಂತಹ ಪ್ರದೇಶದಲ್ಲಿ ಉಪಸ್ಥಿತರಿದ್ದು ನಮ್ಮಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಯ ನದಿ ಪಾತ್ರದಲ್ಲಿರುವ ಪ್ರದೇಶಗಳಿಗೆ ಒತ್ತುಕೊಟ್ಟು ಅಲ್ಲೇ ಕ್ರೋಢೀಕರಿಸಿ, ಜನತೆಯನ್ನು ಸ್ಥಳಾಂತರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಇದೇ ಸಮಯದಲ್ಲಿ ಜಿಲ್ಲಾ ಆಡಳಿತದಿಂದ ವಿಭಿನ್ನ ವಿಭಾಗಗಳ ಸಿಬ್ಬಂದಿಗಳನ್ನು ನಿಯೋಜಿಸಲಾಯಿತು ಮತ್ತು ಪರಿಹಾರ ಕೇಂದ್ರಗಳನ್ನು ಗುರುತಿಸಲಾಯಿತು. ನಮಗೆ ಇದ್ದ 10–12 ಗಂಟೆಗಳ ಸೀಮಿತ ಅವಧಿಯಲ್ಲಿಯೇ ಸಾಕಷ್ಟು ಕಾರ್ಯಗಳನ್ನು ಮಾಡಿದೆವು.

ಜನತೆಯನ್ನು ಸಂಪರ್ಕಿಸಿದಾಗ ಹೆಚ್ಚಿನ ಜನರು ಪ್ರವಾಹದ ತುರ್ತು ಸ್ಥಿತಿಯ ಬಗ್ಗೆ ತಕ್ಷಣವೇ ಎಚ್ಚೆತ್ತುಕೊಳ್ಳಲಿಲ್ಲ. ಕೆಲವರಂತು ಈ ತರಹದ ಮಳೆ ಸಾಕಷ್ಟು ಬಾರಿ ಬಂದಿರುವುದು ಮತ್ತು ನದಿಯಲ್ಲಿ ಇನ್ನೂ ಬಹಳ ಕಡಿಮೆ ನೀರು ಇರುವುದು. ಇಷ್ಟು ಬೇಗನೇ ಯಾಕೆ ಮನೆಯನ್ನು ಬಿಡಬೇಕು? ಯಾಕೆ ಊರು ಬಿಡಬೇಕೆಂದು? ಮುಂತಾದವುಗಳ ಬಗ್ಗೆ ಪ್ರಶ್ನಿಸಿದರು. ಊಹಾ ಪೋಹಗಳಿಗೆ ಸುಳ್ಳು ವದಂತಿಗಳಿಗೆ ಮಾರು ಹೋದರು. ಆದರೆ ನಮ್ಮ ಪ್ರೆಡಿಕ್ಟಿವ್ ಅನಾಲೈಸಿಸ್ (Predictive Analysis) ಸ್ಪಷ್ಟವಾಗಿ ಈ ಹಿಂದೆ ಬಂದಿರುವ ಎಲ್ಲಾ ಪ್ರವಾಹಗಳಿಗಿಂತ ಭಯಾನಕವಾಗಿರುವುದೆಂದು ಸೂಚಿಸುತ್ತಿತ್ತು. ಅಂದು, ದಟ್ಟನೆಯ ಕಾರ್ಮೋಡಗಳು ಕನಿಷ್ಟ 7–8 ದಿನಗಳ ಮಟ್ಟಿಗೆ ವಿಸ್ತಾರವಾಗಿ ಪಶ್ಚಿಮ ಘಟ್ಟಗಳ ಮೇಲೆ ಹಾಯ್ದು ಹೋಗುವ ಸೂಚನೆ ಇದ್ದವು. ಮತ್ತು ಈಗಾಗಲೇ ಡ್ಯಾಮ್‌ಗಳು ತುಂಬಿಕೊಂಡಿದ್ದವು. ಹೇಗೆ ನೋಡಿದರೂ ಸರಿ ಸುಮಾರು 4,00,000 ಕ್ಯೂಸೆಕ್ಸ್ ನೀರು ಮುಂದಿನ ದಿನಗಳಲ್ಲಿ ನಾವು ನಿಂತ ಹಳ್ಳಿಗಳ ಮೂಲಕ ಹೋಗಲೇ ಬೇಕಿತ್ತು. ಜನತೆಗೆ ತಿಳಿ ಹೇಳುವುದು ದುಸ್ತರವಾಗುತ್ತಿತ್ತು. ಡಂಗುರಗಳನ್ನು ಹೊಡೆಸಲಾಯಿತು, ವಾಟ್ಸಪ್‌ಗಳಿಂದ ಮೆಸೇಜ್‌ಗಳನ್ನು ಬಿಡಲಾಯಿತು. ಪೊಲೀಸ್ ವಾಹನಗಳ ಮೂಲಕ ಘೋಷಿಸಲಾಯಿತು. ಮನೆ ಮನೆಗಳಿಗೂ ಪೊಲೀಸ್ ಕಾನ್ಸ್ಟೇಬಲ್‌ಗಳು ಹೋಗಿ ಮನೆ ತೆರವುಗೊಳಿಸಿ, ಪರಿಹಾರಕೇಂದ್ರಕ್ಕೆ ಹೋಗಲು ಕೇಳಿಕೊಂಡರು. ರೆವಿನ್ಯೂ ಅಧಿಕಾರಿಗಳು ಬಂದು ತಿಳಿ ಹೇಳಿದರು. ಆದರೂ ಅಂದು ಕೊಂಡಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಕ್ಷಣವೇ ಸ್ಪಂದಿಸಲಿಲ್ಲ.

ಕೆಲವು ಜನರು ಸಮಾಧಾನದಿಂದ ವರ್ತಿಸಿ ತಮ್ಮ ತಮ್ಮ ವಾಹನಗಳಲ್ಲಿ ಬೆಲೆ ಬಾಳುವ ಸ್ವತ್ತುಗಳನ್ನು, ಜಮೀನು ಕಾಗದ ಪತ್ರಗಳನ್ನು, ಓದುವ ಪುಸ್ತಕಗಳನ್ನು, ದವಸ ಧಾನ್ಯಗಳನ್ನು, ಬಟ್ಟೆಗಳನ್ನು ತೆಗೆದುಕೊಂಡು ತಕ್ಷಣವೇ ಸುರಕ್ಷಿತ ಪ್ರದೇಶದ ನೆಂಟರಿಷ್ಟರ ಮನೆಗಳಿಗೆ ಅಥವಾ ಪರಿಹಾರ ಕೇಂದ್ರಗಳಿಗೆ ಬಂದು ಸೇರಿದರು. ಹಲವು ಬಾರಿ ತಮ್ಮ ಟ್ರ್ಯಾಕ್ಟರ್‌ಗಳ ಮೂಲಕ ಸ್ವತ್ತುಗಳನ್ನು ಸಾಗಿಸಿ ಯಾವುದೇ ನಷ್ಟವಾಗದಂತೆ ನೋಡಿ ಕೊಂಡರು. ಇನ್ನುಳಿದವರಿಗೆ ತಿಳಿ ಹೇಳುವ ಕೆಲಸವು ಜಾರಿಯಲ್ಲಿತ್ತು.

ಈ ಮಧ್ಯೆ ನಮಗೆ ಆಲ್ ಇಂಡಿಯಾ ರೇಡಿಯೋದ ಆಕಾಶವಾಣಿ ಧಾರವಾಡದಲ್ಲಿರುವ ಸ್ನೇಹಿತರು ಜ್ಞಾಪಕವಾಗಿ ಅವರ ಮೂಲಕ ನಿರ್ದೇಶನಗಳನ್ನು ಜಾರಿಗೊಳಿಸಲು ಇಚ್ಛಿಸಿದೆವು. ಆದರೆ ಎಲ್ಲ ಜಿಲ್ಲೆಗಳಿಗೂ ಅಪಾಯದ ಸ್ಥಿತಿ ಇದೆ, ಊರುಗಳನ್ನು ಖಾಲಿ ಮಾಡಿ ಎಂದಲ್ಲಿ, ಎಲ್ಲಾ ಕಡೆಯ ಜನರು, ಎಲ್ಲವನ್ನು ಎತ್ತಿಕೊಂಡು ಗುಳೆ ಎದ್ದಾಗ ಗೊಂದಲದ ವಾತಾವರಣವಾಗಿ ತೊಂದರೆಗಳಾಗುತ್ತಿದ್ದವು. ಯಾರು ಎಲ್ಲಿಗೆ ಹೋಗಬೇಕು ? ಹೇಗೆ

KRISHNA RIVER DATEWISE FLOW

Measured the water flow on	RAJAPURA WEIR (Interstate entry point OF Krishna river from Maharashtra to Karnataka)	River Doodhganga (KALAMWADI DAM) + River Vedhganga (PATGAON DAM) inflow into Krishna Stream. (FROM SADALAGA AND KARDAGA POINTS)	KALLOLA BARRAGE (Measur-ementGauge)	HIPPARAGI BARRAGE	ALMATTI DAM INFLOW	ALMATTI DAM OUTFLOW
	(CUSECS)	(CUSECS)	(CUSECS)	(CUSECS)	(CUSECS)	(CUSECS)
31.7.19	149625	25520	175145	121500	119850	175563
1.8.19	160195	29920	190114	182400	150409	212753
2.8.19	163975	32032	196007	218500	205832	229292
3.8.19	172030	33088	205118	228100	222113	238573
4.8.19	196623	34496	231119	245000	233190	258710
5.8.19	227068	37312	264380	264000	259000	303525
6.8.19	252582	42240	294825	283000	318000	320535
7.8.19	295890	50572	346362	316000	364939	362875
8.8.19	334000	57024	388970	354000	385340	355340
9.8.19	338000	60896	391896	401000	430000 (12.30PM)	380000
10.8.19	344000	63360	407360	422000	570000 (8 PM)	530000
					600833 (2 PM)	
				458000	631475 (5 PM)	
11.8.19	344000	63120	410000	494000	680272 (6 PM)	530000
				508000	645556 (8.30 PM)	
				515000	606944 (12PM)	
					616944 (6 PM)	
12.8.19	321383	63000	418680	523000	641990	540000
13.8.19	288000	55440	343440	433000	611667	570000
					597778 (1PM)	
					611790 (3 PM)	
					604814 (6PM)	
14.8.19	237187	50840	288027	424000	587754	570000
					568252	
				414000	545397	
15.8.19	187807	45056	226251	405000	523583	550000
				391000	473581	
16.8.19	153000	38720	191720	375000	479563	520000
				363000	438333	
17.8.19	128500	31680	160180	329000	447129	420000
18.8.19	83512	23232	106744	280000	341759	300000
19.8.19	53400	10653	64053	182000	215000	215000
20.8.19	32700	7040	39740	80000	111250	100000
21.8.19	29196		34828	25000	45064	
22.8.19	23100		27852	25000	20551	

ಹೋಗಬೇಕು ? ಯಾವ ರಸ್ತೆಯಲ್ಲಿ ಹೋಗಬೇಕು ?ಯಾವ ರಸ್ತೆಯಲ್ಲಿ ಹೋಗಬಾರದು ?ಇತ್ಯಾದಿ ಮಾಹಿತಿಗಳ ಅಭಾವದಿಂದ ಭಾರಿ ದುರ್ಘಟನೆಗಳಾಗುವ ಸಾಧ್ಯತೆ ಇತ್ತು. ಈ ಸಂದರ್ಭದಲ್ಲಿ ಕಿಡಿಗೇಡಿಗಳು ಅನಾಹುತಗಳನ್ನು ಮಾಡಬಹುದಾದ ಸಾಧ್ಯತೆಗಳಿದ್ದವು. ಒಂದು ನೈಸರ್ಗಿಕ ವಿಕೋಪದೊಂದಿಗೆ ಇನ್ನೊಂದು ಸಾಮಾಜಿಕ ವಿಕೋಪ ಉದ್ಭವವಾಗುವ ಸಾಧ್ಯತೆ ಇತ್ತು.

ಈಗಾಗಲೇ ಎಷ್ಟು ಗರಿಷ್ಠ ಮಟ್ಟದ ಪ್ರವಾಹ ಮತ್ತು ನೀರಿನ ಹರಿವು ಆಗಬಹುದು ಎಂಬುದನ್ನು ತಿಳಿದುಕೊಂಡಿದ್ದೆವು. ಮತ್ತು ಏನು ಮಾಡಬೇಕೆಂಬುದನ್ನು ಕ್ವಾಂಟಮ್ ಕಂಪ್ಯೂಟಿಂಗ್ (Quantum Computing) ನಿಂದಾಗಿ ತಿಳಿದುಕೊಂಡಿದ್ದೆವು. ಈಗ ಇನ್ನು ಮುಂದುವರೆದು, ಪ್ರತಿ ನಿತ್ಯವು ಏನೇನು ಮಾಡಬೇಕೆಂಬುವ ಪಟ್ಟಿಯನ್ನು ತಯಾರಿಸಿಕೊಂಡೆವು. ಅದರಂತೆ ಮೊದಲನೇ ದಿನ ಎಲ್ಲಾ ಡ್ಯಾಮ್‌ಗಳಿಂದ ಬಿಟ್ಟಿರುವ ನೀರಿನ ಪ್ರಮಾಣ, ನದಿಯ ನೀರಿನ ಪ್ರಮಾಣ, ಮಳೆಯ ವ್ಯಾಪಕತೆ ಇತ್ಯಾದಿಗಳನ್ನು ಗಮನಿಸಿ ಯಾವ ಯಾವ ಹಳ್ಳಿಗಳು ಜಲಾವೃತವಾಗುವುದೆಂದು ತಿಳಿದು, ಅವುಗಳನ್ನು ಮಾತ್ರ ನಾವು ಖಾಲಿ ಮಾಡಿಸಬೇಕೆಂಬುದನ್ನು ನಿರ್ಣಯಿಸಿದೆವು. ಆ ಹಳ್ಳಿಗಳ ಹೆಸರುಗಳನ್ನು ಮಾತ್ರ ನಾವು ಆಕಾಶವಾಣಿ ಧಾರವಾಡ ಕೇಂದ್ರಕ್ಕೆ ಕಳುಹಿಸಿ ಅವರಿಂದ ಪ್ರಸಾರಗೊಳಿಸಿದೆವು. ಈ ಪ್ರಾಂತವು ಕೃಷಿಯಲ್ಲಿ ಮುಂದುವರೆದಿದ್ದು ಎಲ್ಲರೂ ರೇಡಿಯೋದಲ್ಲಿ ಕೃಷಿ ವಾರ್ತೆಯನ್ನು, ಕೃಷಿ ಕಾರ್ಯಕ್ರಮಗಳನ್ನು ಕೇಳುವ ಹವ್ಯಾಸವಿದೆ. ರೇಡಿಯೋದಲ್ಲಿ ಮುಂದಿನ ದಿನಗಳಲ್ಲಿ ಮೋಡ ಕವಿದಿದ್ದು, ಮಳೆಯ ವಾತಾವರಣ ಇತ್ಯಾದಿ ಸಾಮಾನ್ಯ ಮುನ್ಸೂಚನೆಗಳ ನಂತರ ಪೋಲೀಸ್ ವಿಭಾಗದ ಕಡೆಯಿಂದ ಕೆಲವೊಂದು ಹಳ್ಳಿಗಳನ್ನು ತಕ್ಷಣವೇ ಖಾಲಿ ಮಾಡಬೇಕೆಂಬ ಮುನ್ಸೂಚನೆಯನ್ನು ಕೊಡುತ್ತಿದ್ದಂತೆಯೇ ಜನತೆಯು ಎಚ್ಚೆತ್ತರು. ಹಳ್ಳಿಗಳಲ್ಲಿದ್ದ ನಮ್ಮ ಸಿಬ್ಬಂದಿಗಳ ಕೆಲಸಗಳು ತಕ್ಷಣವೆ ಸರಳವಾದವು. ಜನತೆಯು ತಮ್ಮ ತಮ್ಮ ವಾಹನಗಳಾದ ಟ್ರ್ಯಾಕ್ಟರ್, ಜೀಪ್, ಎತ್ತಿನಗಾಡಿ ಬಳಸಿಕೊಂಡು ತಮ್ಮ ಸ್ವತ್ತುಗಳನ್ನು ಸಾಗಿಸಿದರು. ವಾಹನವಿಲ್ಲದವರಿಗೆ ಪೋಲೀಸರ ವಾಹನಗಳನ್ನು ಕೊಡಲಾಯಿತು. ಪೋಲೀಸರು ಸಹಾಯ ಹಸ್ತ ನೀಡಿದರು. ವಾಹನಗಳ ಕೊರತೆ ಕಂಡು ಬಂದಾಗ ಇನ್ನಿತರ ವಾಹನಗಳನ್ನು ಬಳಸಲಾಯಿತು. ಸರ್ಕಾರಿ ವಾಹನಗಳನ್ನು ಜನತೆಗಾಗಿ ಬಳಸಿಕೊಳ್ಳಲಾಯಿತು. ಇನ್ನೂ ಹೆಚ್ಚಿನ ಅವಶ್ಯಕತೆ ಕಂಡು ಬಂದದ್ದರಿಂದ. ಹತ್ತಿರದ ರಸ್ತೆಗಳಲ್ಲಿ ಓಡಾಡುತ್ತಿದ್ದ ಸಣ್ಣ ಟ್ರಕ್‌ಗಳನ್ನು, ಇತರ ವಾಹನಗಳನ್ನು ಕರೆತಂದು ಜನತೆಗಾಗಿ ಬಳಸಲಾಯಿತು. ಸಕ್ಕರೆ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಇನ್ನಿತರ ಕಾರ್ಖಾನೆಗಳ ವಾಹನಗಳನ್ನು ಸಹ ಬಳಸಿಕೊಳ್ಳಲಾಯಿತು. ಸ್ಥಳದಲ್ಲಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು.

ಜನತೆಯನ್ನು ಅವರವರ ನೆಂಟರಿಷ್ಟರ ಮನೆಗೆ ತಲುಪಿಸಲಾಯಿತು. ಪರಿಹಾರ ಕೇಂದ್ರಗಳಿಗೆ ತಲುಪಿಸಲಾಯಿತು. ಕೊನೆಯಲ್ಲಿ ದನಕರುಗಳನ್ನು ಸಾಗಿಸಿ, ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಮನೆಗಳಿಗೆ ಬೀಗಗಳನ್ನು ಹಾಕಿಸಿ, ಹಳ್ಳಿಯ ಒಳಗೆ ನೀರು ಬರುವಾಗ, ಕಡೆಯದಾಗಿ ಉಳಿದುಕೊಂಡ ಪುರುಷರನ್ನು ಸ್ಥಳಾಂತರಿಸಿದರು. ಕೆಲವೊಂದು ಕಡೆ ನೀರು ಹೆಚ್ಚಾದಲ್ಲಿ ತೆಪ್ಪಗಳನ್ನು ಬಳಸಿದರು. ಹಳ್ಳಿ ಖಾಲಿ ಆದ ನಂತರ ಊರಿನ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಯಿತು. ಎಲ್ಲರನ್ನು ರಕ್ಷಿಸಿದ ನಂತರವೇ ಕೊನೆಯದಾಗಿ ನಮ್ಮ ಸಿಬ್ಬಂದಿ ಆ ಗ್ರಾಮದಿಂದ ಹಿಂತಿರುಗಿದರು. ಹಂತ ಹಂತವಾಗಿ ಹಳ್ಳಿಗಳನ್ನು ಸ್ಥಳಾಂತರಿಸಿದ ಮಾಹಿತಿಯನ್ನು ಮುಂದೆ ಕೊಡಲಾಗಿದೆ. ವಿಭಿನ್ನ ತಾರೀಖಿನಲ್ಲಿ ಹರಿಯುತ್ತಿದ್ದ ನೀರಿನ ಪ್ರಮಾಣವನ್ನು ಕೊಡಲಾಗಿದೆ. ಜಿಲ್ಲಾವಾರು ಮತ್ತು ಠಾಣಾವಾರು ಸೂಚಿಯನ್ನು ಕೊಡಲಾಗಿದೆ. ಮಾಡಿದ ಕಾರ್ಯದ ಅನುಕ್ರಮಣಿಕೆಯನ್ನು ಕೊಡಲಾಗಿದೆ. ಸಿಬ್ಬಂದಿಗಳು ಗಮನಿಸಬೇಕು.

ಪ್ರತಿಯೊಂದು ಹಳ್ಳಿಯಲ್ಲೂ ನಮ್ಮ ಪೋಲೀಸರು ಎಷ್ಟು ಜನ ಪುರುಷರು, ಎಷ್ಟು ಮಹಿಳೆಯರು, ಎಷ್ಟು ಮಕ್ಕಳು, ಎಷ್ಟು ಗರ್ಭಿಣಿ ಮಹಿಳೆಯರು, ಎಷ್ಟು ವಯಸ್ಕರು ಮತ್ತು ಎಷ್ಟು ಖಾಯಿಲೆಯಿಂದ ಬಳಲುತ್ತಿದ್ದರು ಎಂಬುವವರ ಸಂಖ್ಯೆಗಳನ್ನು, ಹೆಸರುಗಳನ್ನು ಸೂಚಿ ಪಟ್ಟಿಯನ್ನು ಮಾಡಿ ಠಾಣೆಯ ಕಂಟ್ರೋಲ್ ರೂಮ್‌ಗೆ ಕಳುಹಿಸಿ, ಅವರನ್ನು ಯಾವ ಪರಿಹಾರ ಕೇಂದ್ರದಲ್ಲಿ ಇಡಲಾಗಿದೆ ಎಂಬುವದನ್ನು ಗುರುತು ಮಾಡುತ್ತಿದ್ದರು. ಮತ್ತು ಅದೇ ಪರಿಹಾರ ಕೇಂದ್ರದಲ್ಲಿ ಸಮನ್ವಯಕರಾಗಿ ಸಹ ಮುಂದೆ ಕರ್ತವ್ಯವನ್ನು ನಿರ್ವಹಿಸಿದರು.

GHATAPRABHA RIVER DATEWISE FLOW

Date	Markandeya (enters in right side of Ghataprabha River)	Bellary naala (enters in right side of the Ghataprabha river)	Hiranyakeshi (enters in left side of the Ghataprabha river)	Ghataprabha River (Hidkal dam Water discharge) (cusecs)	Ghataprabha River .
31.7.19	5000	12000	10000	2620	29620
1.8.19	5000	13000	14500	2474	35000
2.8.19	12500	15000	16500	2425	46425
3.8.19	14000	18000	17000	2328	51328
4.8.19	16500	18500	20500	2413	57913
5.8.19	18000	19000	23000	44038	104038
6.8.19	23000	20000	27000	58000	128040
7.8.19	27000	21000	38000	89134	175134
8.8.19	38500	24100	50200	97460	210260
9.8.19	38800	24000	51000	100942	214742
10.8.19	24600	19500	48000	108751	200851
11.8.19	8455	15256	41102	90617	155430
12.8.19	7000	11500	39000	85003	142503
13.8.19	3400	9760	18718	47599	79477
14.8.19	3400	8000	15000	42145	68545
15.8.19	3000	7000	13500	34168	57668
16.8.19	2700	6000	12700	29000	50400
17.8.19	2500	5000	11500	24564	43564
18.8.19				11266	
19.8.19				5000	
20.8.19				8535	
21.8.19				5201	
22.8.19				5330	

ಗರ್ಭಿಣಿ ಮಹಿಳೆಯರನ್ನು, ಮಕ್ಕಳು ಮತ್ತು ತಾಯಂದಿರನ್ನು, ಖಾಯಿಲೆ ಇರುವವರನ್ನು ಪರಿಹಾರ ಕೇಂದ್ರದಿಂದ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಹೀಗೆ ಮಾಡುವುದರಿಂದ ಇವರಲ್ಲಿ ಯಾವುದೇ ತರಹದ ಖಾಯಿಲೆ, ಸಾವು ನೋವುಗಳು ಆಗಲಿಲ್ಲ.

ಮುಂದೆ ಪರಿಹಾರ ಕೇಂದ್ರದಲ್ಲಿ, ತಹಶೀಲ ಮೂಲಕ ಪರಿಹಾರ ಸಾಮಗ್ರಿಗಳ ವ್ಯವಸ್ಥಿತ ವಿತರಿಸಲು ಅನುಕೂಲವಾಯಿತು. ಯಾವ ಕೇಂದ್ರದಲ್ಲಿ ಯಾರಿಗೆ ಯಾವ ವಸ್ತು ಕೊರತೆ ಇತ್ತೋ, ಆ ವಸ್ತುವನ್ನು ಅಲ್ಲಿಗೆಯೇ ಸರಿಯಾಗಿ ಕಳುಹಿಸಲು ಅನುಕೂಲವಾಯಿತು. ಯಾವುದೇ ತರಹದ ನೂಕುನುಗ್ಗಲು, ಆಗದಂತೆ ಪೋಲೀಸರು ನೋಡಿಕೊಂಡರು. ಪ್ರವಾಹದ ಸಂದರ್ಭದಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಯಿತು. ಸರಕಾರಿ ನೌಕರರನ್ನು ಚುನಾವಣೆಯ ಸಮಯದಂತೆ ಗರಿಷ್ಠ ಸಂಖ್ಯೆಯಲ್ಲಿ ಕರ್ತವ್ಯದಲ್ಲಿ ತೊಡಗಿಸಲಾಯಿತು.

ಹೀಗೆ ಹಂತ ಹಂತವಾಗಿ ಸುರಕ್ಷತೆಗೆ ಸ್ಥಳಾಂತರಿಸಲು ಇರುವ ಎಲ್ಲಾ ಸಂಪನ್ಮೂಲಗಳನ್ನು ದಿನ ದಿನವು ನಿಯೋಜಿಸಲಾಯಿತು. ಪ್ರತಿ ನಿತ್ಯವು ಎಲ್ಲಾ ಮಾಹಿತಿಗಳನ್ನು ಬಳಸಿಕೊಂಡು ಒಂದು ಅನುಕ್ರಮಣಿಕೆಯಲ್ಲಿ ಹಳ್ಳಿಗಳನ್ನು ವಿಂಗಡಿಸಲಾಯಿತು. ಈ ಹಳ್ಳಿಗಳ ಹೆಸರನ್ನು ಆಲ್ ಇಂಡಿಯಾ ರೇಡಿಯೋ ಓದುವುದು. ಹಳ್ಳಿಗಳಲ್ಲಿರುವ ನಮ್ಮ ಸಿಬ್ಬಂದಿಗಳು ಜನರನ್ನು ಎಚ್ಚರಿಸಿ, ವಾಹನಗಳನ್ನು ಕೊಡಿಸಿ ಸ್ವತ್ತುಗಳನ್ನು, ಜನತೆಯನ್ನು ಸುರಕ್ಷತೆಯೆಡೆಗೆ ಕಳುಹಿಸಿದರು. ಹಳ್ಳಿಗಳಲ್ಲಿ ತಮಟೆ ಡಂಗುರಗಳ ಮೂಲಕ ಸಾರಲಾಯಿತು. ಇದು ನಿರಂತರವಾಗಿ ಹಗಲು ರಾತ್ರಿ ನಡೆಯಿತು.

ಮಹಾಬಲೇಶ್ವರ, ಚಾಂಡೋಲಿ ಘಟ್ಟಗಳಲ್ಲಿ ಮಳೆಯು ಸುರಿದು ಡ್ಯಾಮ್‌ಗಳಿಂದ ಬಿಟ್ಟ ನೀರು ಕೃಷ್ಣಾ ನದಿಯಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸಿತು. ಮಹಾರಾಷ್ಟ್ರದ ಗಡಿಯಲ್ಲಿ ರಾಜಾಪೂರ ವೇರ್‌ನಲ್ಲಿ ಅಳತೆ ಸಿಗುತ್ತಿತ್ತು. ಗಗನ ಬಾವಡಾ ಮತ್ತು ದಾಜಿಪೂರ ಘಟ್ಟಗಳಲ್ಲಿ ಮಳೆಯು ಸುರಿದಾಗ ಮತ್ತು ಅಲ್ಲಿನ ಡ್ಯಾಮ್‌ಗಳಿಂದ ಬಿಟ್ಟ ನೀರು ಮಹಾರಾಷ್ಟ್ರದ ಉಪನದಿಗಳಲ್ಲಿ ಹೆಚ್ಚಾಗಿ ಕರ್ನಾಟಕದ ಕಾರದಗಾ ಪಾಯಿಂಟನಲ್ಲಿ ಮತ್ತು ಕಲ್ಲೋಳ ಬ್ಯಾರೇಜನಲ್ಲಿ ನೀರಿನ ಅಳತೆ ಸಿಗುತ್ತಿತ್ತು. ಮುಂದುವರೆದು ಕಣಕುಂಬಿ ರೇಂಜ್, ಸಹ್ಯಾದ್ರಿ ಪಶ್ಚಿಮ ಘಟ್ಟದಲ್ಲಿ ಸುರಿದ ಮಳೆ ಮತ್ತು ಅಲ್ಲಿನ ಡ್ಯಾಮ್‌ಗಳಿಂದ ಬಿಟ್ಟ ನೀರು ಕರ್ನಾಟಕದ ಕೃಷ್ಣೆಯ ಉಪ ನದಿಗಳಲ್ಲಿ ನೀರು ಹೆಚ್ಚಾಗಿ ಅವುಗಳ ಅಳತೆಯು ಹಿಡಕಲ್ ಮತ್ತು ನವಿಲು ತೀರ್ಥ ಡ್ಯಾಮ್‌ಗಳಲ್ಲಿ ಸಿಗುತ್ತಿತ್ತು. ಕೃಷ್ಣಾ ನದಿಯ ಮುಖ್ಯ ಪಾತ್ರದಲ್ಲಿ ಹರಿಯುವ ನೀರನ್ನು ಹಿಪ್ಪರಗಿ ಬ್ಯಾರೇಜನಲ್ಲಿ ಅಳೆಯಲಾಗುತ್ತದೆ. ಈ ಬಾರಿ 5,23,000 ಕ್ಯೂಸೆಕ್ಸ್ ನೀರು 12-8-2019 ರಂದು ಹರಿದು ಶತಮಾನದ ದಾಖಲೆಯಾಯಿತು.

ಮಳೆಯು ಬಹಳ ವಿಸ್ತಾರವಾಗಿತ್ತು. ಮೊದಲ ಕೆಲವು ದಿನಗಳು ಮಹಾಬಲೇಶ್ವರದ ಘಟ್ಟದಲ್ಲಿ ಪ್ರಬಲವಾಗಿದ್ದು, ನಂತರದ ಕೆಲವು ದಿನಗಳು ಗಗನಬಾವಡಿ ಬೆಟ್ಟಗಳಲ್ಲಿ ಪ್ರಬಲವಾಗಿ ನಂತರ ಕಣಕುಂಬಿ ಪಶ್ಚಿಮ ಘಟ್ಟದಲ್ಲಿ ಪ್ರಬಲವಾಯಿತು. ಈ ಎಲ್ಲಾಕಡೆ ಬಿದ್ದ ಮಳೆಯು ಆಗಸ್ಟ 8-9 ನೇ ತಾರೀಖಿನಷ್ಟರಲ್ಲಿ ಕೃಷ್ಣಾ ನದಿ ಪಾತ್ರದಲ್ಲಿ 4,00,000 ಕ್ಯೂಸೆಕ್ಸ್ ನೀರು ಹರಿಯುವಂತೆ ಮಾಡಿತು. ಒಂದೇ ದಿನಕ್ಕೆ, ಅಂದರೆ 10 ನೇ ತಾರೀಖಿನಂದು 4,58,000 ಕ್ಯೂಸೆಕ್ಸ್‌ಗಳಿಗೆ ಹೆಚ್ಚಿ. 2005 ನೇ ಇಸವಿಯ ಗರಿಷ್ಟ ಪ್ರವಾಹದ ಮಿತಿಯನ್ನು ಮೀರಿತು. ಮಳೆಯು ಇನ್ನೂ ಬಿಡದೆ ಮುಂದುವರೆದಿತ್ತು. ಮಹಾರಾಷ್ಟ್ರದಿಂದ ಇನ್ನೂ ಹೆಚ್ಚಿನ ನೀರು ಬರತೊಡಗಿದಾಗ. ಕೊಲ್ಲಾಪುರ, ಸಾಂಗಲಿ ಮುಳುಗಡೆಯಾಗತೊಡಗಿತು. ನಮ್ಮಲ್ಲಿಯೂ ಭೂಜಲವು ತುಂಬಿಕೊಂಡು ಹೆಚ್ಚಾಗಿತ್ತು. ನೆಲದ ಮಣ್ಣಿನ ಪದರಗಳು ಗರಿಷ್ಟ ಪ್ರಮಾಣದಲ್ಲಿ ನೀರನ್ನು ಹೀರಿಕೊಂಡಿತ್ತು. ಆದ್ದರಿಂದ ಕೃಷ್ಣೆಯು ತನ್ನ ಹಿಂದಿನ ಮಿತಿಯ ಗಡಿಗಳನ್ನು ಮೀರಿ ಹೊರ ಹರಿಯತೊಡಗಿತು. ಇದೇ ಸಮಯದಲ್ಲಿ ಮಲಪ್ರಭಾ, ಘಟಪ್ರಭಾ ಸಹ ಎಲ್ಲವೂ ಬೃಹತ್ತಾಗಿ ಹರಿಯತೊಡಗಿದವು. ಭೂಮಿಯು ನೀರನ್ನು ಹೀರಿಕೊಂಡು ಸೆಚ್ಯೂರೇಶನ್ ಪಾಯಿಂಟನ್ನು ತಲುಪಿತು. ಕಣಿವೆ ಹಳಗಳು ತುಂಬಿದವು. ನದಿಯು ತನ್ನ ಪಾತ್ರದಿಂದ ಹೊರಚಿಮ್ಮಿತು. ವಿಸ್ತಾರವಾಗಿ ದೂರ ದೂರದ ಹಳ್ಳಿಗಳು ಜಲಾವೃತವಾದವು. ಎಲ್ಲ ಕಡೆ ನೀರು ನುಗ್ಗತೊಡಗಿತ್ತು. ಈಗಾಗಲೇ ಆ ದೂರದ ಪ್ರದೇಶಗಳಿಂದ ಸಾಕಷ್ಟು ಜನರನ್ನು ಒಂದೆರಡು ದಿನಗಳ ಮುಂಚಿತವಾಗಿಯೇ ಸ್ಥಳಾಂತರಿಸಿದ್ದರಿಂದ ಯಾವುದೇ ಅನಾಹುತಗಳು ಆಗಲಿಲ್ಲ. ನಾವು ತೆಗೆದುಕೊಂಡ ಮುಂಜಾಗ್ರತೆ ಕ್ರಮ

MALAPRABHA RIVER DATEWISE FLOW

DATE (Assessed water flow in the river)	MALAPRABHA RIVER (NAVILUTEERTHA DAM) INFLOW (CUSECS)	MALAPRABHA RIVER (NAVILUTEERTHA DAM) OUTFLOW (CUSECS)
31.7.19	8544	2619
01.8.19	26101	2620
02.8.19	23269	164
03.8.19	14180	164
04.8.19	31032	2425
05.8.19	30855	3000
06.8.19	39992	6000
07.8.19	40364	40000
08.8.19	94618	81048
09.8.19	72744	72774
10.8.19	60000	60000
11.8.19	25000	51064
12.8.19	15000	15000
13.8.19	10373	11064
14.8.19	7042	9000
15.8.19	8214	1941
16.8.19	7869	1514
17.8.19	4636	1464
18.8.19	6244	1464
19.8.19	4705	1464
20.8.19	2985	1364
21.8.19		1264
22.8.19		1664
23.8.19		1864

ಸಫಲವಾಯಿತು.

ಕೆಲವೊಂದು ಗ್ರಾಮಗಳಿಗೆ ಇದ್ದಕ್ಕಿದ್ದಂತೆ ನೀರು ಬಂದು ಜಲಾವೃತಗೊಂಡಾಗ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ನಾವೆಗಳನ್ನು ಕಳುಹಿಸಲಾಯಿತು. ಸರಿ ಸುಮಾರು ೮೦ ರಾಫ್ಟ್‌ಗಳು ಪ್ರವಾಹದಲ್ಲಿ ಕರ್ತವ್ಯ ನಿರ್ವಹಿಸಿದವು. ನೀರಿನ ಹರಿವಿನ ಗತಿಯು 5 ನಾಟ್‌ಗಳಿಗಿಂತ ಹೆಚ್ಚಾದಲ್ಲಿ ಈ ನಾವೆಗಳಿಗೆ ಕಷ್ಟವಾಗುವುದು. ಅಂತಹ ಜಾಗಗಳಿಗೆ ಭಾರತೀಯ ಸೇನೆಯ ನಾವೆಗಳನ್ನು ರಾಫ್ಟ್‌ಗಳನ್ನು ಕಳುಹಿಸಲಾಯಿತು. ಕೆಲವೊಂದು ಕಡೆ ಸೇನೆಯ ಹೆಲಿಕಾಪ್ಟರ್‌ಗಳನ್ನು ಬಳಸಲಾಯಿತು. ಸೇನೆಯ ಹೆಲಿಕಾಪ್ಟರ್‌ಗಳ ಕಂಟ್ರೋಲ್ ರೂಮ್‌ನ್ನು ಸಾಂಬ್ರಾ ಏರ್‌ಪೋರ್ಟ್‌ನಿಂದ ನಡೆಸಲಾಯಿತು. ಇದಕ್ಕೆ ಹೆಚ್ಚುವರಿ ಪೊಲೀಸ್ ಅಧೀಕ್ಷಕರನ್ನು ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿರವರನ್ನು ನಿಯೋಜಿಸಲಾಗಿತು. ಉತ್ತರ ವಲಯದ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ ಮತ್ತು ಗದಗ ಅಲ್ಲದೇ ಕೊಪ್ಪಳ, ರಾಯಚೂರು, ಯಾದಗಿರಿ, ದಾವಣಗೆರೆ ಜಿಲ್ಲೆಗಳಿಂದಲೂ ಜನರನ್ನು ರಕ್ಷಿಸಲಾಯಿತು. ಹೆಚ್ಚಿನ ಮಳೆಯ ರಭಸವಿದ್ದಾಗ ಸೇನೆಯ ಹೆಲಿಕಾಪ್ಟರ್‌ಗಳು ಹೋಗಲಾಗಲಿಲ್ಲ. ಆಗ ಕಾರವಾರದಿಂದ ನೌಕಾಪಡೆಯ ಹೆಲಿಕಾಪ್ಟರ್‌ನ್ನು ತರೆಸಲಾಯಿತು. ಬೆಳಗಾವಿಯ ಬ್ರಿಗೇಡ್ ಹೆಡ್‌ಕ್ವಾರ್ಟರ್ಸ್‌ನಿಂದ ಭಾರತೀಯ ಸೇನೆಗೆ ಸಂಬಂಧಪಟ್ಟಂತೆ ಸಮನ್ವಯತೆಯನ್ನು ಮಾಡಿದರು. ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಯಾವುದೇ ಪ್ರಾಣಹಾನಿ ಆಗಲಿಲ್ಲ.

ಮೊದಲು ಲ್ಯಾಂಡ್‌ಲೈನ್ ಟೆಲಿಫೋನ್‌ಗಳು ಕೆಲಸ ಮಾಡುವುದನ್ನು ನಿಲ್ಲಿಸಿದವು. ನಂತರದ ದಿನಗಳಲ್ಲಿ ಮೋಬೈಲ್ ಟಾವರಗಳು ಪ್ರವಾಹಕ್ಕೆ ಸಿಲುಕುತ್ತಿದ್ದಂತೆ ಮೋಬೈಲ್ ಕನೆಕ್ಟಿವಿಟಿ ನಿಂತಿತು. ಆದರೆ ವೈಫೈ ಕಾಲ್ಸ್ ಕರೆಗಳು ಕೆಲವು ಕಡೆ ಆಶ್ಚರ್ಯಕರವಾಗಿ ನಡೆಯುತ್ತಿತ್ತು. ಪೊಲೀಸ್ ವೈರ್‌ಲೆಸ್ ಸೀಮಿತವಾದ ಸ್ಥಳಗಳಲ್ಲಿ ಉಪಯೋಗವಾಗುತ್ತಿತ್ತು. ದಿನೇ ದಿನೇ ನಮ್ಮ ಕಂಟ್ರೋಲ್ ರೂಮ್‌ಗಳಿಗೆ ಬರುತ್ತಿದ್ದ ಕರೆಗಳು ಕ್ರಮೇಣವಾಗಿ ಕಡಿಮೆಯಾಗುತ್ತಾ ಹೋಯಿತು. ಹಲವು ಬಾರಿ, ಯಾರಾದರೂ ಪ್ರವಾಹದಲ್ಲಿ ಇನ್ನೂ ಸಿಲುಕಿ ಕೊಂಡಿದ್ದಾರೆಂದೆನಿಸುತ್ತಿತ್ತು. ಆದರೆ ಅದೃಷ್ಟವಶಾತ್ ಅಂತಹ ಯಾವುದೇ ದುರ್ಘಟನೆಯೂ ಆಗಲಿಲ್ಲ.

ಸೇತುವೆಗಳಲ್ಲಿ ನೇಮಿಸಲಾದ ಸಿಬ್ಬಂದಿಗಳಿಂದ ಮಾಹಿತಿಯನ್ನು ತೆಗೆದುಕೊಂಡು ಆ ರಸ್ತೆಯಲ್ಲಿರುವ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಯಿತು. ಮುಂದೆ ಮುಖ್ಯ ಸೇತುವೆಗಳ ಸೂಚಿಯನ್ನು ಕೊಡಲಾಗಿದೆ. ಪ್ರವಾಹದ ದೃಷ್ಟಿಯಲ್ಲಿ ಎಲ್ಲ ಸೇತುವೆಗಳು ಪ್ರಮುಖವಾಗಿದ್ದು, ಸೇತುವೆ ಕೆಳಗಡೆ ૩ ಅಡಿ ಅಂತರದಲ್ಲಿ ನೀರು ಇರುವಾಗಲೇ ಆ ರಸ್ತೆಯಲ್ಲಿ ಸಂಪೂರ್ಣ ಸರ್ಕಾರಿ ಸಾರಿಗೆ ವ್ಯವಸ್ಥೆ ಮತ್ತು ಖಾಸಗಿ ವಾಹನಗಳನ್ನು ನಿರ್ಬಂಧಿಸಲಾಯಿತು. ಪೋಲೀಸ್ ವಾಹನ ಮತ್ತು ಅಂಬುಲೆನ್ಸ ಬಿಟ್ಟು ಯಾವುದೇ ವಾಹನಗಳಿಗೆ ರಸ್ತೆಯನ್ನು ತೆರೆದಿರಲಿಲ್ಲ. ಸೇತುವೆಗಳ ಬಳಿ ನಮ್ಮ ವಾಹನಗಳನ್ನು ನಿಲ್ಲಿಸಿ ಪೋಲಿಸರ ತಾತ್ಕಾಲಿಕ ತಂಗುದಾಣ ಮಾಡಲಾಯಿತು. ಸೇತುವೆ ಬಳಿ ನೀರು ಬಂದಾಗ ಸಂಪೂರ್ಣ ಸೇತುವೆಯನ್ನು ಬ್ಲಾಕೇಡ್ ಮಾಡಲಾಗಿ, ಬ್ಯಾರಿಕೇಡ್ ಇಟ್ಟು ಪೋಲೀಸ್ ಪಹರೆ ಹಾಕಲಾಯಿತು. ಈ ಒಂದು ವ್ಯವಸ್ಥೆಯಿಂದ ಸೇತುವೆಗಳಲ್ಲದೇ, ರಸ್ತೆಗಳು ಸಹ ಖಾಲಿಯಾದವು. ಕೇವಲ ಪರಿಹಾರ ವ್ಯವಸ್ಥೆಯ ವಾಹನಗಳನ್ನು ಮಾತ್ರ ರಸ್ತೆಯಲ್ಲಿ ಓಡಾಟಕ್ಕೆ ಅವಕಾಶ ಮಾಡಿಕೊಡಲಾಯಿತು. ರಸ್ತೆಯಲ್ಲಿ ಜನನಿಬಿಡತೆ ಕಡಿಮೆಯಾಯಿತು. ಯಾವುದೇ ತರಹದ ವಾಹನಗಳು ನೀರಿನಲ್ಲಿ ಕೊಚ್ಚಿ ಹೋಗುವಂತ ದುರಂತಗಳು ಆಗಲಿಲ್ಲ. ಆದರೆ ಒಂದುಘಟನೆ ಕಿತ್ತೂರ ರಸ್ತೆ ಬ್ಲಾಕೇಡ್‌ನಲ್ಲಿ ಆಯಿತು. ಸೇತುವೆಗಳ ರಕ್ಷಣೆಗೆ ನಿಂತ ಪೋಲೀಸರ ಮೇಲೆಯೇ ನಿಯಂತ್ರಣ ತಪ್ಪಿದ ಕಾರು ಡಿಕ್ಕಿ ಹೊಡೆದು ಸಬ್ ಇನ್ಸಪೆಕ್ಟರ್ ಶ್ರೀ ಈರಣ್ಣ ಲಟ್ಟಿ ಇವರು ಕರ್ತವ್ಯದಲ್ಲಿಯೇ ಹುತಾತ್ಮರಾದರು.

ಸಮಯ ಬಂದಾಗ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಬಂಧಗೊಳಸಲಾಯಿತು. ಬೆಂಗಳೂರಿನಿಂದ ಮುಂಬೈಗೆ ಹೋಗುವ ವಾಹನಗಳನ್ನು ರದ್ದುಪಡಿಸಲಾಯಿತು. ನಿಪ್ಪಾಣಿ ಬಳಿಯ ದೂಧಗಂಗಾ ನದಿಯ ಸೇತುವೆ ಮತ್ತು ಕೊಗನೋಳಿ ಇಂಟರ್‌ಸ್ಟೇಟ್ ಪಾಯಿಂಟದಲ್ಲಿ ವೇದಗಂಗಾ ನದಿಯ ಸೇತುವೆ ಮೇಲೆ ನೀರು ಹರಿಯಿತು. ಈ ಎರಡು ಸೇತುವೆಗಳು ಸುರಕ್ಷೆ ದೃಷ್ಟಿಯಲ್ಲಿ ಅತ್ಯಂತ ಪ್ರಮುಖವಾಗಿರುವವು. ಏಕೆಂದರೆ ಬಹಳ ಅಲ್ಪಾವಧಿಯಲ್ಲಿಯೇ ವ್ಯಾಪಕವಾಗಿ ಪ್ರವಾಹವು ಸೇತುವೆ ಮೇಲೆ ವಿಸ್ತರಿಸುತ್ತದೆ. 6-8-2019 ರಂದು












GOODS CARRIER

ಬೆಂಗಳೂರು, ಮುಂಬಯಿ ರಾಷ್ಟ್ರೀಯ ಹೆದ್ದಾರಿಯನ್ನು ನಿಲ್ಲಿಸಲಾಯಿತು. ರಸ್ತೆಯಲ್ಲಿ ಹೋಗುವ ವಾಹನಗಳನ್ನು ಪೂನಾ, ಮುಂಬೈ , ಕೋಲ್ಹಾಪುರಗಳಲ್ಲಿ , ಬೆಳಗಾವಿ, ಹಿರೇಬಾಗೇವಾಡಿ, ಹುಬ್ಬಳ್ಳಿ, ದಾವಣಗೆರೆ, ಬೆಂಗಳೂರಿನ ತನಕ ಧಾಬಾಗಳಲ್ಲಿ ಮತ್ತು ಬಸ್‌ಸ್ಟ್ಯಾಂಡ್‌ಗಳಲ್ಲಿ ನಿಲ್ಲಿಸಲಾಯಿತು. ಯಾವುದೇ ವಾಹನಗಳನ್ನು ಸೇತುವೆಗಳ ಸುತ್ತಮುತ್ತ ಇಲ್ಲದಂತೆ ನೋಡಿಕೊಳ್ಳಲಾಯಿತು. ಸಾಕಷ್ಟು ವಾಹನಗಳನ್ನು ಹಿಂದಿರುಗಿಸಲಾಯಿತು. ಕೆಲವರು ಸಿಲುಕಿಕೊಂಡವರಿಗೆ ಊಟದ ವ್ಯವಸ್ಥೆ ಮಾಡಲಾಯಿತು. ಇದು ಆದ ನಂತರ ರಸ್ತೆಗಳು ಖಾಲಿ ಆಗಿದ್ದು ಕೇವಲ ಪೊಲೀಸರು, ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಸರಕಾರಿ ವಾಹನಗಳಿಗೆ ಮಾತ್ರ ಸ್ವಾಭಾವಿಕವಾಗಿ ಮೀಸಲಾಯಿತು. ಇದರಿಂದ ಪರಿಹಾರ ಕೆಲಸಗಳ ನಿರ್ವಹಣೆ, ತುರ್ತು ಕೆಲಸಗಳ ನಿರ್ವಹಣೆ ಸುಲಭವಾಯಿತು.

ಕಿತ್ತೂರಿನ ಬಳಿ ಇರುವ ಮಲಪ್ರಭಾ ಸೇತುವೆ ಸಹ ಅಷ್ಟೇ ಪ್ರಮುಖವಾದದ್ದು. ಅಥಣಿಯ ದರೂರ ಸೇತುವೆ ಮತ್ತು ಅಂಕಲಿಯ ಸೇತುವೆ ಮತ್ತು ಸಂಕೇಶ್ವರದ ಹಿರಣ್ಯಕೇಶಿ ಸೇತುವೆ ಮತ್ತು ಕಾಕತಿಯ ಮಾರ್ಕಂಡೆಯ ನದಿ ಸೇತುವೆಗಳ ಮೇಲೆ ಪ್ರವಾಹ ಬಂದಾಗ ಬೆಳಗಾವಿ ಜಿಲ್ಲೆಯ ಮುಖ್ಯಾಲಯವು ಅನ್ಯ ಭಾಗಗಳಿಂದ ಸಂಪರ್ಕ ಕಡಿತಗೊಳ್ಳುವುದು. ಇದಕ್ಕಿಂತ ಮುಂಚೆಯೇ ಅಧಿಕಾರಿಗಳು, ಸಂಪನ್ಮೂಲಗಳು, ಪರಿಹಾರ ಸಾಮಗ್ರಿಗಳು ಎಲ್ಲವೂ ಆಯಾ ಭಾಗಗಳಲ್ಲಿ ವಿಭಾಗಿಸಿ ನೆಲೆಸಬೇಕು. ಇಲ್ಲಿ ಮುಂದೆ ಜೊತೆಯಲ್ಲಿ ಕೊಟ್ಟಿರುವ ಸೇತುವೆಗಳ ಮಾಹಿತಿ ಮತ್ತು ತಾರೀಖುಗಳನ್ನು ಗಮನಿಸಬೇಕು.

ಪಡಸಲಗಿ ಬ್ಯಾರೇಜ್, ಹಿಪ್ಪರಗಿ ಬ್ಯಾರೇಜ್, ಮುಧೋಳ ರಸ್ತೆ ಮುಳುಗಡೆ ಆದಾಗ ಬೆಳಗಾವಿ ಮತ್ತು ವಿಜಯಪುರದ ಸಂಪರ್ಕ ಕಡಿತವಾಗುವುದು. ಬಾಗಲಕೋಟೆಯ ಕೋಲ್ಹಾರ ಸೇತುವೆ ಮತ್ತು ಆಲಮಟ್ಟಿ ಡ್ಯಾಮಿನ ಮುಂದಿನ ಸೇತುವೆಗಳು ಮಾತ್ರ ಮುಳುಗಡೆ ಯಾಗುವುದಿಲ್ಲ. ಮಲಪ್ರಭಾ ಉಕ್ಕಿದಾಗ ಬಾಗಲಕೋಟೆ, ಗದಗ ಮತ್ತು ಧಾರವಾಡ ಮಧ್ಯೆ ಸಂಪರ್ಕ ಕಡಿತವಾಗುತ್ತದೆ. ಎಲ್ಲತರಹದ ಸಾರಿಗೆ ವ್ಯವಸ್ಥೆಗಳನ್ನು ವಾಹನದ ಓಡಾಟಗಳನ್ನು ವಲಯದಲ್ಲಿ ಸಂಪೂರ್ಣವಾಗಿ ನಿರ್ಭಂಧಿಸಲಾಯಿತು. ಬೆಳಗಾವಿಯಿಂದ ಗೋವಾದ ರಸ್ತೆಯ ಕಣಕುಂಬಿ ಚೋರ್ಲಾ ಘಾಟಿನಲ್ಲಿ ಭೂಕುಸಿತ ಉಂಟಾಗುವ ಸಾಧ್ಯತೆಯನ್ನು ಕಂಡು ಅಲ್ಲಿನ ಎಲ್ಲಾ ಪ್ರವಾಸಿ ತಾಣಗಳನ್ನು ಮುಚ್ಚಿಸಿ, ಸಾರಿಗೆಯನ್ನು ನಿರ್ಬಂಧಿಸಲಾಯಿತು. ಹೆಚ್ಚಿದ ಮಳೆಯಿಂದಾಗಿ ಮುಂದೆ ಭಾರಿ ಪ್ರಮಾಣದ ಭೂಕುಸಿತಗಳು ಉಂಟಾದವು. ಅದೃಷ್ಟವಶಾತ್ ಯಾವುದೇ ತರಹದ ದುರಂತಗಳು ಆಗಲಿಲ್ಲ.

ಹುಬ್ಬಳ್ಳಿಯಿಂದ ಕ್ಯಾಸಲ್‌ರಾಕ್ ಮತ್ತು ವಾಸ್ಕೋ ರೈಲ್ವೆಟ್ರ್ಯಾಕ್, ಬೆಳಗಾವಿ ಮತ್ತು ವಾಸ್ಕೋ ರೈಲ್ವೆ ಟ್ರ್ಯಾಕ್, ಹುಬ್ಬಳ್ಳಿ – ಬೆಳಗಾವಿ ರೈಲ್ವೆ ಟ್ರ್ಯಾಕ್ ಹಲವು ಕಡೆ ಪ್ರವಾಹದಿಂದಾಗಿ ತೊಂದರೆಗೀಡಾಯಿತು. ಅಲ್ಲಿನ ರೈಲುಗಳನ್ನು ರದ್ದುಪಡಿಸಲಾಯಿತು. ಸಮಯಕ್ಕೆ ಸರಿಯಾಗಿ ಮುಂಚಿತವಾಗಿಯೇ ರೈಲು ಪ್ರಯಾಣವನ್ನು ರದ್ದುಪಡಿಸಿದ್ದರಿಂದ ಯಾವುದೇ ಪ್ರಯಾಣಿಕರಿಗೆ ರೈಲ್ವೆ ಸ್ಟೇಶನ್‌ಗಳಲ್ಲಿ ಇರುವ ಪ್ರಮೇಯ ಬರಲಿಲ್ಲ. ಕೆಲವೊಬ್ಬರಿದ್ದರು, ಅವರುಗಳನ್ನು ಜಿಆರ್‌ಪಿ ಪೊಲೀಸರು ಮತ್ತು ಸಮಾಜ ಸೇವಕರು ನೋಡಿಕೊಂಡರು.

ಹಲವು ದಿನಗಳವರೆಗೂ ಬೆಳಗಾವಿಯ ವಿಮಾನ ಸಂಪರ್ಕ ಕಡಿತಗೊಂಡಿತ್ತು. ಮತ್ತು ಹವಾಮಾನ ವೈಪರೀತ್ಯದಿಂದಾಗಿ ಪ್ರಯಾಣದ ಸಮಯಗಳು ಬದಲಾವಣೆಗಳಾಗುತ್ತಿದ್ದವು.

ನೈಸರ್ಗಿಕ ವಿಕೋಪದಂತಹ ಪರಿಸ್ಥಿತಿಯಲ್ಲಿ ಜನತೆಯು ಹೆಚ್ಚಾಗಿ ಮನೆಯ ಒಳಗಡೆ ಇರುವ ಪ್ರಯತ್ನ ಮಾಡಬೇಕು. ಅತೀ ಅವಶ್ಯಕ ಇದ್ದಲ್ಲಿ ಮಾತ್ರ ಪ್ರಯಾಣ ಮಾಡಬೇಕು. ಕೆಲವರು ಕುತೂಹಲಗೊಂಡು ಎಲ್ಲಿ ಏನು ನಡೆಯುತ್ತಿದೆ ಎಂದು ನೋಡಲು ಸುಮ್ಮ ಸುಮ್ಮನೆ ವಾಹನಗಳನ್ನು ತೆಗೆದುಕೊಂಡು ತಿರುಗಾಡುತ್ತಿರುತ್ತಾರೆ. ಅಂಥವರನ್ನು ಪೊಲೀಸರು ನಿರ್ಬಂಧಗೊಳಿಸಿ, ಕೆಲವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಯಿತು. ತಮಾಷೆಗಳನ್ನು ಮಾಡುತ್ತಾ ಜನತೆಯು ಸುತ್ತಿದಲ್ಲಿ, ತುರ್ತು ಸೇವೆಗಳಲ್ಲಿದ್ದವರಿಗೆ ತೊಂದರೆಯಾಗುವುದು. ಈಗಾಗಲೇ ರಸ್ತೆಗಳ ನಿರ್ಬಂಧನೆ ಇದ್ದುದ್ದರಿಂದ ಪ್ರವಾಹತುರ್ತು ಪರಿಸ್ಥಿತಿಯ ಎಲ್ಲ ಕಾರ್ಯಗಳು ಸುಸೂತ್ರವಾಗಿ ನಡೆದವು.

ಒಟ್ಟು ಸುಮಾರು 915 ಪರಿಹಾರ ಕೇಂದ್ರಗಳಿಗೆ ವಸ್ತು ಸಾಮಗ್ರಿಗಳನ್ನು ಯಾವುದೇ ರೀತಿಯಲ್ಲಿ









ಗೊಂದಲವಾಗದಂತೆ, ಎಲ್ಲ ಪ್ರವಾಹ ಪೀಡಿತರಿಗೆ ಸಕಾಲದಲ್ಲಿ ತಲುಪುವಂತೆ ಏರ್ಪಾಡು ಮಾಡಲಾಯಿತು. ಕೆಲವೊಂದು ಮುಖ್ಯವಾದ ಪರಿಹಾರ ಕೇಂದ್ರಗಳ ಸೂಚಿಯನ್ನು ಇಲ್ಲಿ ಕೊಡಲಾಗಿದೆ. ಆ ಪರಿಹಾರ ಕೇಂದ್ರಗಳಲ್ಲಿ ಯಾವಾಗಲೂ ಒಬ್ಬ ಪೋಲೀಸರನ್ನು ನಿಯೋಜಿಸಲಾಗಿತ್ತು. ಪೋಲೀಸರು ವೈದ್ಯರೊಂದಿಗೆ, ನಗರ ಪಾಲಿಕೆಯವರೊಂದಿಗೆ, ರೆವಿನ್ಯೂ ವಿಭಾಗದವರೊಂದಿಗೆ, ಪರಿಹಾರ ವಿತರಣೆಯವರೊಂದಿಗೆ ಸಮನ್ವಯಿಸಿ ಅನ್ಯತುರ್ತು ಪರಿಸ್ಥಿತಿಗಳನ್ನು ನಿಭಾಯಿಸಿದರು. ಕಾಯಿಲೆಗಳು ಬಂದಾಗ ವೈದ್ಯಕೀಯ ನೆರವನ್ನು ಒದಗಿಸಲಾಯಿತು. ಪ್ರತಿ ಪರಿಹಾರ ಕೇಂದ್ರದಲ್ಲಿ ಇರುವ ಕೊರತೆಯನ್ನು ನೀಗಿಸಲಾಯಿತು. ಕಂಟ್ರೋಲ್ ರೂಮಿನ ಮೂಲಕ ಸಾಮಗ್ರಿಗಳನ್ನು ಪೊಲೀಸ್ ಸಿಬ್ಬಂದಿಯೊಂದಿಗೆ ನಿರ್ಧರಿಸಿದ ಪರಿಹಾರ ಕೇಂದ್ರದಲ್ಲಿ ವಿತರಿಸಲಾಯಿತು. ಯಾವುದೇ ತರಹದ ಸೋಂಕು, ಖಾಯಿಲೆಗಳು ಬರಬಾರದೆಂದು ಆರೋಗ್ಯ ಇಲಾಖೆ ಮೂಲಕವಾಗಿ ಸ್ವಚ್ಛತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಡಿಡಿಟಿ, ಮತ್ತು ಇತರ ರೋಗ ಮತ್ತು ಸೋಂಕು ನಿಯಂತ್ರಕ ರಾಸಾಯನಿಕಗಳನ್ನು ಪ್ರತಿಯೊಂದು ಪರಿಹಾರ ಕೇಂದ್ರದ ಸುತ್ತಲೂ ಸಿಂಪಡಿಸಲಾಯಿತು.

ಕ್ರಮೇಣವಾಗಿ ಎಲ್ಲ ರಸ್ತೆಗಳು ಸಾರಿಗೆ ನಿರ್ಬಂದನೆಗೆ ಒಳಪಟ್ಟಾಗ ರಸ್ತೆಯಲ್ಲಿ ಬೀಡುಬಿಟ್ಟ ಟ್ರಕ್ ಡ್ರೈವರ್‌ಗಳಿಗೆ ಆಹಾರ ಪದಾರ್ಥಗಳನ್ನು ಪರಿಹಾರ ಕೇಂದ್ರಗಳಿಂದ ಮತ್ತು ಸ್ವಯಂ ಸೇವಕರುಗಳ ಮೂಲಕ ಹಂಚಲಾಯಿತು.

ಕೆಲವೊಂದು ಪದಾರ್ಥಗಳಿಗೆ ಅಭಾವದ ಪರಿಸ್ಥಿತಿಯಿದ್ದದ್ದರಿಂದ ಯಾವುದೇ ವ್ಯಾಪಾರಿಗಳು ಬ್ಲಾಕ್ ಮಾರ್ಕೆಟಿಂಗ್ ಕಾಳಸಂತೆ ಮಾಡದಂತೆ ವಿಶೇಷವಾದ ನಿಗಾವನ್ನು ನಮ್ಮ ಗುಪ್ತಚಾರರಿಂದ ಇಡಲಾಯಿತು. ಕಾಳಸಂತೆ ಮಾಡುವವರಿಗೆ ಕಠಿಣಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಯಿತು. ಕೆಲವರ ಮೇಲೆ ಕಾನೂನು ಕ್ರಮ ಜರುಗಿಸಲಾಯಿತು. ಹಾಲು, ತರಕಾರಿ, ಪೆಟ್ರೋಲ್, ಡಿಸೇಲ್‌ಗಳು ಅಲ್ಲಲ್ಲಿಯೇ ಬೇರೆ ಬೇರೆಯಾದ ಪ್ರಾಂತಗಳಲ್ಲಿ ವಿತರಿಸುವಂತೆ ನೋಡಿಕೊಳ್ಳಲಾಯಿತು. ಇದರಲ್ಲಿ ವ್ಯಾಪಾರಿಗಳ ಸಹಕಾರವನ್ನು ಪಡೆದುಕೊಳ್ಳಲಾಯಿತು. ವ್ಯಾಪಾರಿಗಳಿಗೆ ತಮ್ಮದೇ ಆದ ಸಂಘ ಸಂಸ್ಥೆಗಳಿವೆ. ಅವುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೆವು. ಮದ್ಯದ ಅಂಗಡಿಗಳನ್ನು ತಾತ್ಕಾಲಿಕವಾಗಿ ಆದೇಶದ ಮೂಲಕ ಮುಚ್ಚಿಸಲಾಯಿತು. ಕರಾವಳಿಯಿಂದ ಬರಬೇಕಾದ ಪೆಟ್ರೋಲ್ ಟ್ಯಾಂಕರ್‌ಗಳು ರಸ್ತೆ ಕುಸಿತದಿಂದಾಗಿ ಬರಲಾಗಲಿಲ್ಲ. ಪೆಟ್ರೋಲ್, ಡಿಸೇಲ್‌ನ ಅಭಾವದ ಮುನ್ಸೂಚನೆ ಕಂಡು ಬಂದಿತು. ತಾತ್ಕಾಲಿಕವಾಗಿ ಗುಲಬರ್ಗಾ, ಹುಬ್ಬಳ್ಳಿ, ಕಡೆಯಿಂದ ತರಸಲಾಯಿತು. ಈಗಾಗಲೇ ರಸ್ತೆಗಳ ಮೇಲಿನ ನಿರ್ಬಂಧನೆ, ಅನಾವಶ್ಯಕ ಪ್ರಯಾಣಗಳ ನಿರ್ಬಂಧನೆಯಿಂದ ಪೆಟ್ರೋಲ್ ಅಭಾವವು ಆಗಲಿಲ್ಲ. ಎಲ್ಲಾ ಅವಶ್ಯಕ ವಸ್ತುಗಳು, ಪದಾರ್ಥಗಳು ಜನತೆಯ ಕೈಗೆಟುಕುವಂತೆ ಮುತುವರ್ಜಿ ವಹಿಸಿದೆವು. ಯಾವುದೇ ಕಾಳಸಂತೆಯಾಗಲಿಲ್ಲ.

ಪ್ರವಾಹವು ಬಂದಾಗ ನದಿಯಲ್ಲಿರುವ ಮೊಸಳೆಗಳು ಮತ್ತು ಹಾವುಗಳು, ವಿಷಜಂತುಗಳು ನದಿ ಪಾತ್ರದಿಂದ ಜನರಿರುವ ಜಾಗದಕಡೆಗೆ ಬಂದವು. ಅರಣ್ಯ ಇಲಾಖೆಯ ಸಹಾಯವು ಗಣನೀಯವಾಗಿದ್ದು ಸಾಕಷ್ಟು ಮೊಸಳೆ ಮತ್ತು ಹಾವುಗಳನ್ನು ಹಿಡಿದು ಹೊರ ಹಾಕಲಾಯಿತು ಮತ್ತು ಜನತೆಯನ್ನು ಸುರಕ್ಷಿತವಾಗಿ ಇಡಲಾಯಿತು. ಹಾವು ಹಿಡಿಯುವವರ ಸೂಚಿಯನ್ನು ಮಾಡಿಕೊಂಡು ಅವರುಗಳ ಸೇವೆಯನ್ನು ಪಡೆಯಲಾಯಿತು. ಹಾವು ಕಡಿತಕ್ಕಾಗಿ ತೊಂದರೆಪಟ್ಟವರಿಗೆ ಕೊಡಲು ಆ್ಯಂಟಿ ವೆನಮ್ ಇಂಜೆಕ್ಷನ್‌ಗಳ ಅಗಾಧವಾದ ಸಂಗ್ರಹಣೆಯನ್ನು ವೈದ್ಯಕೀಯ ವಿಭಾಗದಿಂದ ಮಾಡಲಾಯಿತು. ಸರ್ಕಾರಿ ವೈದ್ಯರಲ್ಲದೇ ಖಾಸಗಿ ವೈದ್ಯರು, ಆಂಬುಲೆನ್ಸನಲ್ಲಿ ಇಡಲಾಯಿತು. ಪೊಲೀಸ ಠಾಣೆ ಮತ್ತು ಪೊಲೀಸ ವಾಹನಗಳಲ್ಲಿ ಆ್ಯಂಟಿವೆನಮ್ ಇಂಜೆಕ್ಷನ್ ಇಟ್ಟುಕೊಂಡು ತುರ್ತು ಸಂದರ್ಭದಲ್ಲಿ ಸ್ಥಳೀಯ ನರ್ಸಗಳು ಮತ್ತು ಅಂಗನವಾಡಿಯ ಕಾರ್ಯಕರ್ತರ ಸಹಾಯದಿಂದ ಕಾರ್ಯನಿರ್ವಹಿಸಿದರು. ಗಮನಿಸಬೇಕಾದ ಅಂಶಗಳೆಂದರೆ ಸಾಕಷ್ಟು ಜನರಿಗೆ ಹಾವುಗಳ ಕಡಿಯುತ್ತವೆ.

ಪರಿಹಾರ ಕೇಂದ್ರಗಳು ಸಾಕಷ್ಟು ದಿನಗಳು ನಡೆದವು. ಹಲವು ಕಡೆ ಜನ ಪ್ರತಿನಿಧಿಗಳು, ಭೇಟಿ ನೀಡಿದರು. ಜನತೆಯ ಕಷ್ಟ ನಷ್ಟಗಳ ಬಗ್ಗೆ ವಿಚಾರಿಸಿದರು. ನಮ್ಮೊಂದಿಗೆ ವಿಚಾರ ವಿಮರ್ಶಿಸಿದರು. ವಿಚಾರ ವಿಮರ್ಶೆಯಲ್ಲಿ ನಾವು ಸಾಕಷ್ಟು ತಯಾರಿಗಳನ್ನು ಮಾಡಿಕೊಂಡು ಇಲ್ಲಿಯವರೆಗೆ ಏನು ಆಗಿದೆ, ಮುಂದೆ ಏನಾಗಬೇಕಿದೆ ಮತ್ತು

ಅವರುಗಳ ಬಳಿ ನಮ್ಮ ಅಪೇಕ್ಷೆಗಳನ್ನು ವಿಸ್ತ್ರತವಾಗಿ ಕೇಳಿಕೊಂಡೆವು. ಇಲ್ಲಿಯ ಒಂದು ಉತ್ತಮ ಸಂವಹನದಿಂದಾಗಿ ನಾವು ಕೇಳಿದ ಎಲ್ಲಾ ತರಹದ ವ್ಯವಸ್ಥೆ, ಸ್ವತಂತ್ರತೆ , ಸಹಕಾರ ದೊರೆಯಿತು. ಈ ಸಂದರ್ಭದಲ್ಲಿ ರೆವಿನ್ಯೂ ಇಲಾಖೆಗೆ ಬೇಕಾದ ಕಷ್ಟ ನಷ್ಟಗಳ ಮಾಹಿತಿ ಜನತೆಯ ಮಾಹಿತಿ ಕೊಟ್ಟೆವು. ಪರಿಹಾರ ಕೇಂದ್ರದ ಕಾವಲು ಕಾಯಿವುದರ ಜೊತೆಗೆ ಊಟ, ಬಟ್ಟೆ, ಔಷಧಿ, ಚಹಾ, ರೆನಕೊರ್ಟ, ಕುಡಿಯುವ ನೀರು, ದನಕರುಗಳಿಗೆ ಮೇವು ಇವುಗಳನ್ನು ಪೊಲೀಸರು ವ್ಯವಸ್ಥೆ ಮಾಡಿದರು.

ಪ್ರತ್ಯೇಕವಾಗಿದ್ದ ಪರಿವಾರಗಳನ್ನು ಹುಡುಕಿ ಒಟ್ಟುಗೂಡಿಸಲಾಯಿತು. ಅವರ ನೆಂಟರಿಷ್ಟರೊಂದಿಗೆ ಸಂಪರ್ಕವನ್ನು ಮಾಡಿಸಿದೆವು. ಇವೆಲ್ಲವು ಜನರನ್ನು ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ನಮ್ಮೊಂದಿಗೆ ಜೋಡಿಸಿತು.

ಪ್ರವಾಹವು ಇಳಿಯುವಾಗ, ಜನರನ್ನು ವಾಪಸ್ಸು ಕಳುಹಿಸುವ ಮುಂಚೆ ಉತ್ಸಾಹಿ ಯುವಕರೊಂದಿಗೆ ಪೊಲೀಸರು ದೋಣಿಗಳಿಂದ ಮೊದಲು ಹಳ್ಳಿಗೆ ಹೋದರು. ಅಲ್ಲಿಯ ಪರಿಸ್ಥಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರು. ಹಿಂದಿರುಗಿ ಬಂದು ಹಳ್ಳಿ ಹಳ್ಳಿಗಳ ರೀಪೋರ್ಟಗಳನ್ನು ನಮಗೆ ತಲುಪಿಸಿದರು. ಇದರಲ್ಲಿ ಕುಸಿದ ಮನೆಗಳ ಮಾಹಿತಿ, ಸತ್ತ ಪ್ರಾಣಿಗಳ ಮಾಹಿತಿ, ವಿದ್ಯುತ್ ತಂತಿ ಕಂಬಗಳ ಮಾಹಿತಿ, ಹಾವು ಮೊಸಳೆಗಳ ಮಾಹಿತಿ, ಬಿದ್ದ ಗಿಡಮರಗಳ ಮಾಹಿತಿ ತಂದರು. ಈ ಮಾಹಿತಿಗಳೊಂದಿಗೆ ನಾವು ರೆವೆನ್ಯೂ ನಗರ ಪಾಲಿಕೆ, ವಿದ್ಯುತ್ ವಿಭಾಗ, ಅರಣ್ಯ ವಿಭಾಗ, ಪಿಡಬ್ಲ್ಯುಡಿ, ವಿಭಾಗಗಳನ್ನು ಸಚೇತಗೊಳಿಸಿ ಹಲವಾರು ತಂಡಗಳನ್ನು ಮಾಡಲಾಯಿತು. ಪ್ರತಿಯೊಂದು ತಂಡಕ್ಕೂ ಸಲಕರಣೆ ಕೊಟ್ಟು ಪೊಲೀಸರು ಮತ್ತೊಂದು ದಿನ ಹಳ್ಳಿಗಳ್ಳಿಗೆ ಹೋಗಿ ಕಂಡ ಸಮಸ್ಯೆಯನ್ನು ಸರಿಪಡಿಸಿ ಹಿಂದಿರುಗಿ ವರದಿಯನ್ನು ಕೊಟ್ಟರು. ಇದಾದನಂತರವೇ ಎಲ್ಲರೊಂದಿಗೆ ಚರ್ಚಿಸಿ ಸಂಪೂರ್ಣ ನೀರು ಇಳಿದಾಗ ರಸ್ತೆಯು ಕಂಡು ಬಂದಾಗ ಜನತೆಯನ್ನು ತೆರಳಿಸಬೇಕೆಂದು ನಿರ್ಧರಿಸಿದೆವು. ಇದರಿಂದ ಜನತೆಯ ವಿಶ್ವಾಸವನ್ನು ಗಳಿಸಿದೆವು.

ಪರಿಹಾರ ಕೇಂದ್ರದಿಂದ ಜನರನ್ನು ಹಂತ ಹಂತವಾಗಿ ವ್ಯವಸ್ಥಿತವಾಗಿ ಅವರವರ ಮನೆಗಳಿಗೆ ತಲುಪಿಸಲಾಯಿತು. ಸರಿಸುಮಾರು ೮–10 ದಿನಗಳವರೆಗೂ ಮನೆಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿದ್ದವು. ಗೋಡೆಗಳು ಶಿಥಿಲಗೊಂಡು ಕುಸಿದಿದ್ದವು. ಮನೆಯೊಳಗೆ ಕೆಸರು ತುಂಬಿಕೊಂಡಿದ್ದು, ಕೆಲವು ಕಡೆ ಹಾವು, ಮೊಸಳೆಗಳು ಸೇರಿಕೊಂಡಿದ್ದವು. ಕೊಳೆತ ಪದಾರ್ಥಗಳ ವಾಸನೆ ಹೆಚ್ಚಾಗಿತ್ತು. ಕೆಲವರು ಮನೆಯ ಮೇಲೆ ದನಕರಗಳನ್ನು ಕಟ್ಟಿ ಬಂದಿದ್ದರು. ಅವುಗಳಲ್ಲಿ ಕೆಲವು ಸತ್ತಿದ್ದವು. ಕೆಲವು ಹಳ್ಳಿಗಳಲ್ಲಿ ಪ್ರವಾಹ ಬರದಿದ್ದರೂ ಅತೀ ಹೆಚ್ಚಿನ ಮಳೆಯಿಂದಾಗಿ ಗೋಡೆಗಳು ಕುಸಿದಿದ್ದವು. ಇವೆಲ್ಲ ದುರುಸ್ತಿಯನ್ನು ಪೊಲೀಸರು ಜನತೆಯನ್ನು ಒಗ್ಗೂಡಿಸಿ ಹಳಗಳಲ್ಲೇ ಇದ್ದು ಮಾಡಿದರು.

ನಗರ ಪಾಲಿಕೆ, ಮುನ್ಸಿಪಾಲಿಟಿಗಳಿಂದ, ಪಂಚಾಯಿತಿಗಳಿಂದ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಮಳೆ ನಿಂತ ಮೇಲೆ ಜನತೆಯು ಪುನ: ಸ್ಥಳಾಂತರಿಸುವಾಗ ಲೋಕೋಪಯೋಗಿ ಇಲಾಖೆಯವರ ಮೂಲಕ ಮನೆಗಳ ಭದ್ರತೆ ಸುರಕ್ಷತೆಯ ಬಗ್ಗೆ ಖಚಿತ ಪಡಿಸಿಕೊಂಡು ಜನತೆಯನ್ನು ಕಳುಹಿಸಲಾಯಿತು. ಕೆಲವೊಂದು ಮನೆಗಳು ಕುಸಿಯುವಂತಿದ್ದಾಗ ಅವರನ್ನು ಪರಿಹಾರ ಕೇಂದ್ರದಲ್ಲಿ ಮುಂದುವರೆಸಲಾಯಿತು ಮತ್ತು ಬಾಡಿಗೆ ಮನೆಯ ವ್ಯವಸ್ಥೆಯನ್ನು ಸರಕಾರದ ವತಿಯಿಂದ ಕಲ್ಪಿಸಲಾಯಿತು. ನಿಧಾನವಾಗಿ ಮನೆ ಮನೆಗಳನ್ನು ಪರಿಶೀಲಿಸಿ, ಹಂತ ಹಂತವಾಗಿ ವಿದ್ಯುತ್ ಸಂಪರ್ಕ ಪೂರೈಸಲಾಯಿತು. ವಿದ್ಯುತ್ ವಿಭಾಗವು ತನ್ನ ಎಲ್ಲ ಸಂಪನ್ಮೂಲಗಳನ್ನು ಬಳಸಿತು. ಬಿದ್ದ ಮರಗಳನ್ನು ಕಟರ್‌ಗಳ ಮೂಲಕ ತೆಗೆಯುವ ವ್ಯವಸ್ಥೆಯನ್ನು ಅರಣ್ಯ ಇಲಾಖೆಯು ಮಾಡಿತು. ಹಲವು ಸಂಘ ಸಂಸ್ಥೆಗಳು, ಸ್ವಯಂ ಸೇವಕರುಗಳು ಜನ ಸೇವೆಗಳಲ್ಲಿ ತೊಡಗಿದರು. ಅವರುಗಳ ಮಾಹಿತಿ ಠಾಣೆಯಲ್ಲಿರುವುದು. ಈ ಎಲ್ಲಾ ಜನತೆಯನ್ನು ಪ್ರವಾಹದ ನಂತರ ಪುನಃಸ್ಥಾಪಿಸುವವರೆಗೂ ಸರಿ ಸುಮಾರು 3 ತಿಂಗಳುಗಳವರೆಗೆ ಪೊಲೀಸರು ಜತೆಯಲ್ಲಿ ಇದ್ದು ಎಲ್ಲರೊಂದಿಗೆ ಸಮನ್ವಯ ಕಾಯ್ದುಕೊಂಡು

ಹಂತ ಹಂತವಾಗಿ ಸುಸೂತ್ರವಾಗಿ ನಡೆಯುವಂತೆ ನೋಡಿಕೊಂಡರು. ಯಾವುದೇ ಜನರು ಜಗಳವಾಡದಂತೆ, ಲೂಟಿ, ರಂಪಾಟ ಮಾಡದಂತೆ ನೋಡಿಕೊಂಡರು ಯಾವುದೇ ತರಹದ ಕಾನೂನು ವ್ಯವಸ್ಥೆಯಲ್ಲಿ ಭಂಗತೆ ಉಂಟಾಗಲಿಲ್ಲ. ಪೊಲೀಸರೊಂದಿಗೆ ಜನತೆಯು ಅದಮ್ಯವಾದ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಬೆಳಗಾವಿಯ ಕೆಲವು ಇಂಡಸ್ಟ್ರಿಗಳು, S.E.Z–ಎಕಸ್, ಇಂಡಾಲ್ಕೋ ಮುಂತಾದವುಗಳಿಂದ ವಾಹನಗಳು, ಕ್ರೇನಗಳನ್ನು, ಮತ್ತು ತಾಂತ್ರಿಕ ಸಹಾಯವನ್ನು ಅವಶ್ಯಕತೆಯಿದ್ದಾಗ ಅವರುಗಳನ್ನು ಕರೆದು ಬಳಸಿಕೊಂಡೆವು. ಬಳ್ಳಾರಿ ನಾಲೆಯಲ್ಲಿ ಇಬ್ಬರು ಮರದ ಮೇಲೆ ಸಿಲುಕಿಕೊಂಡಿದ್ದು, ಉಳಿಸುವ ಎಲ್ಲಾ ತರಹದ ಪ್ರಯತ್ನಗಳು ವಿಫಲವಾಯಿತು. ಬೋಟ್‌ಗಳು ಮತ್ತು ಹೆಲಿಕಾಪ್ಟರ್‌ಗಳು ಸಹ ವಿಫಲವಾದವು. ಆಗ ನಾವೆಲ್ಲರೂ ಸ್ಥಳೀಯ ಜನರನ್ನು ಸೇರಿಸಿಕೊಂಡು ಹಲವಾರು ಟ್ರ್ಯಾಕ್ಟರ್‌ಗಳ ಮೂಲಕ ನದಿಯಲ್ಲಿ ಜಲ್ಲಿ ಕಲ್ಲುಗಳನ್ನು ಸುರಿದು, ಇಂಡಾಲ್ಕೋ ಫ್ಯಾಕ್ಟರಿಯ ದೊಡ್ಡ ಕ್ರೇನ್‌ಗಳನ್ನು ತಂದು ಅವುಗಳಿಗೆ ಹಗ್ಗವನ್ನುಕಟ್ಟಿ ಬೋಟ್‌ಗಳನ್ನು ಮತ್ತು ಸಿಬ್ಬಂದಿಗಳನ್ನು ಕಳುಹಿಸಿದೆವು. ಹಲವು ಬಾರಿ ನೀರಿನಲ್ಲಿ ಮುಳುಗಿ ಎದ್ದು, ರಾತ್ರಿಯೆಲ್ಲ ಹೋರಾಟ ಮಾಡಿ ಬೆಳಗ್ಗೆ ಅವರನ್ನು ರಕ್ಷಿಸುವವರೆಗೂ ನುರಿತ ಈಜುಗಾರರು ನಮ್ಮೊಂದಿಗೆ ನಿಂತುಕೊಂಡಿದ್ದರು. ಇದೇ ರೀತಿ ಹಲವು ಕಡೆಗಳಲ್ಲಿ ಕಾರ್ಖಾನೆಗಳಿಂದ ಸಹಕಾರವನ್ನು ಪಡೆದುಕೊಂಡೆವು.

ಆಲ್ ಇಂಡಿಯಾ ರೇಡಿಯೋದ ಆಕಾಶವಾಣಿ ಧಾರವಾಡದವರು ನಾವು ಕೇಳಿಕೊಂಡಂತೆ ಸರಿ ಸುಮಾರು ೯೦ ಗಂಟೆಗಳಷ್ಟು ಪ್ರಸಾರವನ್ನು ೨೦ ದಿನಗಳಲ್ಲಿ ಮಾಡಿದರು. ನಾವು ಹಳ್ಳಿಗಳಿಗೆ ಸೂಚನೆಯನ್ನು ಕೊಡುವುದು, ಪ್ರವಾಹದ ಬಗ್ಗೆ ಅರಿವನ್ನು ಕೊಡುವುದು, ಜನತೆಯನ್ನು ಎಚ್ಚರಿಸುವುದನ್ನು ಕೇಳಿಕೊಂಡಾಗಲೆಲ್ಲಾ ಮಾಡಿದರು. ಪ್ರತಿನಿತ್ಯ ಬೆಳಗ್ಗೆ ಯಾವ ಯಾವ ಹಳ್ಳಿಗಳಲ್ಲಿ ಪೊಲೀಸರು ತೆರೆವುಗೊಳಿಸುತ್ತಿದ್ದಾರೆಂದು ಜನತೆಯನ್ನು ತಯಾರಿ ಮಾಡುತ್ತಿದ್ದರು. ಹಲವು ಬಾರಿ ನೀರಿನಲ್ಲಿ ಸಿಲುಕಿ ಕೊಂಡವರು ಫೋನ್ ಮಾಡಿದಾಗ ಅವರುಗಳ ಮನೋಬಲವನ್ನು ರಾತ್ರಿಯೆಲ್ಲ ಎಚ್ಚರವಾಗಿಡಲು ನಾವು ಕೇಳಿಕೊಂಡಂತೆ ಡಾ। ರಾಜ್‌ಕುಮಾರ್‌ರವರ ಹಾಡುಗಳನ್ನು ಪ್ರಸಾರ ಮಾಡಿದರು.

ಒಂದು ಸಂದರ್ಭವು ಪಟ್ಟದಕಲ್ಲಿನಲ್ಲಿ ನಡೆಯಿತು. ಪೊಲೀಸರು ಕರೆದಾಗ ಜನರು ಬರದೆ ದೇವಸ್ಥಾನದಲ್ಲಿ ಕುಳಿತರು. ರಾತ್ರಿ ನೀರು ಹೆಚ್ಚಾದ್ದಾಗ ಮತ್ತೊಮ್ಮೆ ಕರೆದೆವು ಆದರೂ ಬರಲ್ಲಿಲ್ಲ. ಆದರೆ ರಭಸ ಹೆಚ್ಚಾದ್ದಾಗ ಗೋಪುರಗಳ ಮೇಲೆ ಕುಳಿತು ರಾತ್ರಿಯೆಲ್ಲಾ ಕರೆ ಮಾಡಿದರು. ಬಹಳ ಶ್ರಮಪಟ್ಟು ನವಿಲುತೀರ್ಥ ಡ್ಯಾಂಮಿನ ಹೊರ ಹರಿವನ್ನು ಕಡಿಮೆಗೊಳಿಸಿದೆವು. ಗೋಪುರದ ಮೇಲಿನಿಂದ ಕರೆ ತರಲು ಪೊಲೀಸರು ನಾವೆಗಳಲ್ಲಿ ಹೋದರು. ಆಗ ಅವರು ನೀರು ಕಡಿಮೆಯಾಗಿದೆ ಬರುವುದಿಲ್ಲ ಹೋಗಿ ಎಂದು ಪೊಲೀಸರನ್ನು ಹಿಂದಕ್ಕೆ ಕಳಿಸಿದರು. ಆ ಸಂದರ್ಭದಲ್ಲಿ ಅವರಲ್ಲಿ ಒಬ್ಬರ ಬಳಿ ರೇಡಿಯೋ ಇದೆ ಎಂದು ತಿಳಿದು ನಾವು ರೇಡಿಯೋ ಸ್ಟೇಶನ್‌ದಿಂದ ಪರಿಸ್ಥಿತಿಯ ಬಗ್ಗೆ ನೇರವಾಗಿ ಮನವರಿಕೆ ಮಾಡಿದೆವು, ಬುದ್ಧಿ ಹೇಳಿದೆವು. ನಾವೆಗಳಲ್ಲಿ ಉನ್ನತ ಅಧಿಕಾರಿಗಳನ್ನು ಕಳುಹಿಸಿ ಗೋಪುರದಿಂದ ಕರೆ ತಂದೆವು. ನಂತರ ನವಿಲು ತೀರ್ಥದ ಹೊರಹರಿವನ್ನು ಹೆಚ್ಚಿಸಲಾಯಿತು. ಅವರಿಗಾಗಿ ರಾತ್ರಿಯೆಲ್ಲಾ ಉತ್ಸಾಹ ಭರಿತ ಕನ್ನಡದ ಹಾಡುಗಳನ್ನು ಬಿತ್ತರಿಸಲಾಯಿತು. ಮತ್ತು ಬೆಳಗ್ಗೆ ಆದಂತೆ, ರೇಡಿಯೋ ಮೂಲಕ ನಾವು ಹೇಳಿದ ಬುದ್ಧಿಮಾತಿಗೆ ಓಗೊಟ್ಟರು.

ಪರಿಹಾರ ಕೇಂದ್ರದಲ್ಲಿ ರೇಡಿಯೋಗಳನ್ನಿಟ್ಟು ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಜನತೆಯೊಂದಿಗೆ ಸ್ಪಂದಿಸಿದೆವು. ಅವರ ಪ್ರಶ್ನೆಗಳಿಗೆ ಉತ್ತರ ನೀಡಿದೆವು. ಅವರ ಸಮಸ್ಯೆಗಳಿಗೆ ಸಮಾಧಾನ ಕೊಟ್ಟೆವು. ನಾವು ಏನು ಮಾಡಿದ್ದೇವೆ, ಮುಂದೆ ಏನು ಮಾಡಬೇಕಾಗಿದೆ ಎಂದು ಹೇಳಲಾಯಿತು. ಜನತೆಯು ಏನು ಮಾಡಬೇಕೇಂಬುದನ್ನು ತಿಳಿ ಹೇಳಲಾಯಿತು. ಪರಿಹಾರ ವಿತರಣಾ ಬಗ್ಗೆ ಹೇಳಲಾಯಿತು. ಸರ್ಕಾರದ ಅನುದಾನಗಳ ಬಗ್ಗೆ ಮಾಹಿತಿಯನ್ನು ಕೊಡಲಾಯಿತು. ಜನತೆಯನ್ನು ತೊಡಗಿಸಿಕೊಂಡು ಅವರುಗಳು ಸಮಾಧಾನವಾಗಿದ್ದು ಪುನಃಸ್ಥಾಪಿಸುವಂತೆ ನೋಡಿಕೊಳ್ಳಲಾಯಿತು. ಆಲ್ ಇಂಡಿಯಾ ರೇಡಿಯೋ ಧಾರವಾಡ ಉತ್ತರ ಕರ್ನಾಟಕದ ಜನತೆಯನ್ನು ತಲುಪಲು ಯಾವಾಗಲು ಒಂದು ಉತ್ತಮ ಸಾಧನವಾಗಿರುವುದು ಮತ್ತು

ಪ್ರಭಾವಿಯಾಗಿರುವುದು. ಇಲ್ಲಿನ ಕೃಷಿ ಕಾರ್ಯಕ್ರಮ, ಶ್ರೋತೃಗಳ ವಿಶೇಷ ಕಾರ್ಯಕ್ರಮದಲ್ಲಿ ಮಧ್ಯದಲ್ಲಿ ಆರಕ್ಷಕ ಮಹಾನಿರೀಕ್ಷಕರು ಮಾತನಾಡುತ್ತಾರೆ ಎಂದರೆ, ವಿಶೇಷವಾದ ಗಮನವನ್ನು ಹಳ್ಳಿಯ ಜನತೆಯು ಕೊಡುತ್ತಾರೆ. ಮತ್ತು ನಾವುಗಳು ಮಾಡಿದ ಸಲಹೆಗಳು ಇರಬಹುದು, ಆದೇಶಗಳು ಇರಬಹದುದು ಅವುಗಳನ್ನು ಗೌರವಿಸಿ ಪಾಲಿಸಿ ನಡೆದುಕೊಳ್ಳುತ್ತಾರೆ.

ಮಾಧ್ಯಮದವರು ಮಾಹಿತಿಯ ವಿನಿಮಯ ಮಾಡಿದರು. ನಾವು ಹೇಳಿದ್ದನೆಲ್ಲಾ ಅವರು ಜನತೆಗೆ ತಲುಪುವಂತೆ ನೋಡಿಕೊಂಡರು. ಜನತೆಯ ಸಂಕಷ್ಟಗಳನ್ನು ತಮ್ಮದೇ ಸೂತ್ರಗಳಿಂದ ತಿಳಿದುಕೊಂಡು ನಮಗೂ ಸಹ ಸೂಚನೆಗಳನ್ನು ಕೊಡುತ್ತಿದ್ದರು. ಜಿಲ್ಲೆಗಳ ಫೋಟೋಗ್ರಾಫರ್ಸ್, ಹವ್ಯಾಸಿ ಫೋಟೋಗ್ರಾಫರ್ಸ, ನಡೆದ ಎಲ್ಲಾ ಘಟನೆಗಳ ಕಾರ್ಯಕ್ರಮಗಳ ಸವಿಯಾದ ನೆನಪುಗಳನ್ನು ಮತ್ತು ಸಾಹಸಿಕ ಕರ್ತವ್ಯಗಳನ್ನು ಸೆರೆಹಿಡಿದರು. ಟಿ.ವಿ. ಮಾದ್ಯಮದವರು ವಾರ್ತೆಗಳ ಮೂಲಕ ಜನತೆಯೊಂದಿಗೆ ಸಂಪರ್ಕ ಇಟ್ಟಿದ್ದರು. ಗುಣಾತ್ಮಕ ಕೆಲಸಗಳನ್ನು ಜನತೆಗೆ ಹೇಳಿ ಅವರನ್ನು ಸಮಾಧಾನದಲ್ಲಿ ಇಟ್ಟಿದ್ದರು. ಯಾರಾದರೂ ಗಮನಕೊಡದಿದ್ದಲ್ಲಿ ಗಮನವನ್ನು ಸೆಳೆಯುತ್ತಿದ್ದರು. ಎಲ್ಲರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಇಟ್ಟುಕೊಂಡು ಪ್ರವಾಹದ ಎಲ್ಲಾ ಸವಾಲುಗಳಲ್ಲಿ ಪೊಲೀಸರ ಜೊತೆಯಲ್ಲಿದ್ದರು. ಎಲ್ಲರ ಒಗ್ಗಟ್ಟಿನ ಫಲವಾಗಿ ಪ್ರವಾಹ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದೆವು.

ಹಲವು ಬಾರಿ ಮಾನ್ಯ ಮುಖ್ಯಮಂತ್ರಿಗಳು ಭೇಟ್ಟಿ ನೀಡಿದರು. ನೇರವಾಗಿ ಸ್ವಯಂ ಉಸ್ತುವಾರಿ ನೋಡಿ ಕೊಂಡಿದ್ದರು. ನಮಗೆ ಎದುರಾದ ಎಲ್ಲಾ ಕೊರತೆಗಳಿಗೆ ಸ್ಪಂದಿಸಿ ತಕ್ಷಣವೇ ಅವುಗಳಿಗೆ ಪರಿಹಾರವನ್ನು ಕಾರ್ಯರೂಪಕ್ಕೆ ತಂದರು. ನಮ್ಮೆಲ್ಲರೊಂದಿಗೆ ನೇರವಾಗಿ ಸಂವಹನ ಇಟ್ಟುಕೊಂಡು, ನಮ್ಮ ಕರ್ತವ್ಯಗಳನ್ನು ಮತ್ತಷ್ಟು ಸರಳ ಮಾಡಿದರು. ಮಾನ್ಯ ಗೃಹ ಮಂತ್ರಿಗಳು, ಕೇಂದ್ರದ ಗೃಹ ಮಂತ್ರಿಗಳು, ಕೇಂದ್ರ ವಿತ್ತ ಮಂತ್ರಿಗಳು, ರಾಜ್ಯದ ಶಾಸಕರುಗಳು, ಮಾಜಿ ಮುಖ್ಯ ಮಂತ್ರಿಗಳು, ಪ್ರಮುಖರು, ಅಧಿಕಾರಿಗಳು, ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿದರು. ಒಂದು ಗುಣಾತ್ಮಕವಾದ ಸಹಯೋಗ ನೀಡಿದರು. ಪ್ರತಿ ದಿನವು ಹಲವು ಆಯಾಮಗಳಲ್ಲಿ ರಿಪೋರ್ಟಗಳನ್ನು ನಾವು ಮಾಡಿಕೊಂಡಿದ್ದು ಅವುಗಳ ಮೂಲಕ ಕಮಾಂಡ್ ಮತ್ತು ಕಂಟ್ರೋಲ್ ನಿಯಂತ್ರಣವನ್ನು ದಕ್ಷತೆಯಿಂದ ನಿರ್ವಹಿಸಲಾಯಿತು. ಎಲ್ಲ ಅಧಿಕಾರಿಗಳು ತಮ್ಮ ಕರ್ತವ್ಯವನ್ನ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು.

ಸರಿ ಸುಮಾರು 915 ಪರಿಹಾರ ಕೇಂದ್ರಗಳನ್ನು ಮತ್ತು 476 ಜಾನುವಾರು ಕೇಂದ್ರಗಳನ್ನು ತೆರೆಯಲಾಗಿತ್ತು. 8,66,846 ಜನತೆಯನ್ನು ಸ್ಥಳಾಂತರಿಸುವಲ್ಲಿ ಪೊಲೀಸರು ತ್ಯಾಗ ಮತ್ತು ನಿಷ್ಠೆಯನ್ನು ತೋರಿಸಿದರು. ಮತ್ತು ಅದರಲ್ಲಿ 6,55,247 ಜನರನ್ನು ಪರಿಹಾರ ಕೇಂದ್ರಗಳಲ್ಲಿ ನೋಡಿಕೊಂಡರು. ಎಲ್ಲರ ಮಾಹಿತಿಯನ್ನು ಇಟ್ಟುಕೊಂಡು, ಎಲ್ಲರಿಗೂ ಸಮಾನವಾಗಿ ಯಾವುದೇ ರೀತಿಯ ತೊಂದರೆಯಿಲ್ಲದೆ ಪರಿಹಾರ ವಿತರಣೆ ಮತ್ತು ಪುನರ್‌ವಸತಿ ಮಾಡಿಸುವ ನಿಟ್ಟಿನಲ್ಲಿ ಉತ್ತರ ವಲಯದ ಎಲ್ಲ ಪೊಲೀಸರು ಕರ್ತವ್ಯ ಪ್ರಜ್ಞೆ ಮೆರೆದರು.

ಪೊಲೀಸರು ತಮ್ಮ ಜೀವವನ್ನು ಮುಡುಪಿಟ್ಟು ಪ್ರವಾಹದ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಿದರು. ಕೆಲವರು ಖಾಯಿಲೆ ಬಿದ್ದರು. ಆದರೂ ಯಾರೂ ತಮ್ಮ ನಿರ್ಧಾರಿತ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಸ್ವಂತ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಗಮನಿಸಬೇಕು. ಕೆಲವು ಕಡೆ ಜನತೆ ಪ್ರವಾಹದಲ್ಲಿ ಸಿಲುಕಿದಾಗ, ಕತ್ತಲಿನಲ್ಲಿ ನಾವೆಗಳಲ್ಲಿ ಹೋಗಿ ರಕ್ಷಿಸಿ , ಸ್ವತಃ ಅಪಾಯದಲ್ಲಿದ್ದು ರಾತ್ರಿಯೆಲ್ಲಾ ಕಾದಿದ್ದಾಗಿದೆ. ಗೋಕಾಕದಲ್ಲಿ ಒಬ್ಬರು ಎಎಸ್‌ಐ ಈ ತರಹದ ಒಂದು ಸಾಹಸ ಮಾಡಿ ನಮ್ಮನೆಲ್ಲಾ ಸಂಪೂರ್ಣ ರಾತ್ರಿ ತುದಿಗಾಲಲ್ಲಿ ನಿಲ್ಲುವಂತೆ ಮಾಡಿದ್ದು ಇದೆ. ಕೆಲವು ಕಡೆ ಎಲ್ಲರನ್ನು ರಕ್ಷಿಸಿ ತಾವೊಬ್ಬರೇ ರಾತ್ರಿ ನೀರಿನ ಮಧ್ಯೆ ಸಿಲುಕಿದ್ದು ಇದೆ. ನನ್ನ ಒಂದು ಆದೇಶದಲ್ಲಿ ಎಲ್ಲಾ ಸಿಬ್ಬಂದಿಗಳು ಸ್ಥಳೀಯವಾಗಿ ಒಬ್ಬ, ಎಸ್.ಪಿ ಆಗಿ, ಒಬ್ಬ ಐಜಿಪಿ ಆಗಿ ಕರ್ತವ್ಯ ನಿಭಾಯಿಸಬೇಕೆಂದು ಹೇಳಿದ್ದೆ. ಈಗ ನನಗೆ ಅನಿಸಿತು ಅವರು ಚಾಚು ತಪ್ಪದೇ ಪಾಲಿಸುತ್ತಿದ್ದರು. ಇವರ ಸೇವಾಮನೋಭಾವವನ್ನು ಮೆಚ್ಚಲು ಯಾವುದೇ ತರಹದ ಪದಗಳು ಇಲ್ಲಾ. ಆ ಒಂದು ಸಮಯದಲ್ಲಿ ಆಗ ಅವರಿಗೆ ತೋಚಿದಂತೆ ನಮ್ಮ ಪೊಲೀಸರು

ಕರ್ತವ್ಯವನ್ನು ನಿಭಾಯಿಸಿದರು, ಅವರ ಈ ನಿರ್ಣಯವನ್ನು ನಾವು ಗೌರವಿಸುತ್ತೇವೆ. ಕಾನಸ್ಟೇಬಲ್‌ಗಳು ತಮ್ಮ ಸಾಹಸದ ಪರಿಚಯವನ್ನು ಮಾಡಿದರು. ತಮ್ಮ ಪ್ರಾಣವನ್ನು ಲೆಕ್ಕಿಸದೇ ಪ್ರವಾಹದ ಸಂದರ್ಭದಲ್ಲಿ ಶೌರ್ಯ, ಸಾಹಸವನ್ನು ತೋರಿದ ಸಿಬ್ಬಂದಿ ವರ್ಗದವರನ್ನು ಗುರುತಿಸಿ ಉಚಿತದಲ್ಲಿ ಪ್ರಶಂಸಿದೆವು. ಎಲ್ಲರು ಒಮ್ಮತದಿಂದ ಕೆಲಸ ಮಾಡಿರುವುದು ಪೊಲೀಸ ಇತಿಹಾಸದಲ್ಲಿ ಇದೊಂದು ವಿಶೇಷ ನಿರ್ದೇಶನ.

ಶತಮಾನದಲ್ಲೇ ಅತೀ ಹೆಚ್ಚಿನ ಪ್ರವಾಹವು ಇದಾಗಿತ್ತು. ಮಾಹಿತಿಗಳನ್ನು ಗುರುತಿಸಿ ಪಡೆದುಕೊಂಡು ವಿಶ್ಲೇಷಿಸಿ ಕ್ವಾಂಟಮ್ ಕಂಪ್ಯುಟಿಂಗ್ ಎಂಬ ಆಳವಾದ ತಾಂತ್ರಿಕ ಅಧ್ಯಯನವನ್ನು ಮಾಡಿ, ಇರುವ ಪರಿಸ್ಥಿತಿಯನ್ನು ದೂರಗಾಮಿಯಾಗಿ ನೋಡಿಕೊಂಡು ಪ್ರೆಡಿಕ್ಟಿವ್ ಅನಾಲೈಸಿಸ್ ಮೂಲಕ ಜಲಾವೃತವಾಗುವ ಜಾಗಗಳನ್ನು ಗುರುತಿಸಿದೆವು. ಪ್ರವಾಹ ನಿರ್ವಹಣೆಯು ಸಫಲಗೊಳ್ಳುವದನ್ನು ನೋಡಿದೆವು. ಹಿಂದೆ 2005 ರಲ್ಲಿ 4,40,000 ಕ್ಯೂಸೆಕ್ಸ್ ನೀರು ಬಂದಿದ್ದು, ಈ ಬಾರಿ 2019 ರಲ್ಲಿ ಅತೀ ಹೆಚ್ಚಿನ ಗರಿಷ್ಟ ಮಟ್ಟದ ಪ್ರವಾಹದಲ್ಲಿ 5,23,000 ಕ್ಯೂಸೆಕ್ಸ್ ನೀರು ಹರಿದಿದ್ದು ಯಾವುದೇ ರೀತಿಯ ಘೋರ ದುರಂತಗಳು ಆಗಲಿಲ್ಲ. ಜನತೆಗೆ ಪರಿಶ್ರಮವಾದುದು ಸಹಜ. ಕೃಷ್ಣೆಯು ತಾನು ಇದ್ದೀನಿ, ಗಮನಿಸುತ್ತಿದ್ದೇನೆ ಎಂದು ತೋರಿಸಿದಳು. ಮುಂದೆಯು ನಾನು ಇರುತ್ತೇನೆ ಎಂದು ಎಚ್ಚರಿಕೆಯನ್ನು ಕೊಟ್ಟಿದ್ದಾಳೆ. ಅದನ್ನು ನಾವು ತಿಳಿದುಕೊಂಡು ಗೌರವಿಸಬೇಕು. ನಾವುಗಳು ಜನತೆ ಮತ್ತು ಪ್ರಕೃತಿ ನಡುವೆ ಇದ್ದ ಸಂವೇದನೆಗಳನ್ನು ಅರಿತುಕೊಂಡು ಪ್ರವಾಹ ನಿರ್ವಹಣೆಯನ್ನು ಮಾಡಿದೆವು. ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಂಡು ಹೋಗಬೇಕೆಂಬುದನ್ನು ನಾವುಗಳೆಲ್ಲರೂ ಕಲಿಯಬೇಕಾದ ಪಾಠ. 2019 ರಲ್ಲಿ ಇಂತಹ ಸಂದರ್ಭವು ಎದುರಾದದ್ದರಿಂದಲೇ ನಾವುಗಳು ಏನೇನು ಮಾಡಬೇಕೆಂಬ ನಿಟ್ಟಿನಲ್ಲಿ ಆಲೋಚನೆ ಮಾಡತೊಡಗಿದೆವು ಮತ್ತು ಕಲಿತೆವು.

ಈ ಪ್ರವಾಹ ನಿರ್ವಹಣೆಯಲ್ಲಿ ನಾವು ಸಂಗ್ರಹಿಸಿದ ದತ್ತಾಂಶ ಮಾಹಿತಿಗಳು, ಮಾದರಿಗಳು, ವಿಶ್ಲೇಷಣೆಗಳು, ತಾಂತ್ರಿಕತೆಗಳು, ನಿಪುಣತೆಗಳಿಂದ ಕೆಲವೊಂದು ತಯಾರಿಗಳನ್ನು ಮಾಡಿಕೊಂಡು, ಒಂದು ಅನುಕ್ರಮಣಿಕೆಯಲ್ಲಿ ಜನತೆಯನ್ನು ರಕ್ಷಿಸಲಾಯಿತು. ರೆಡ್ ಅಲರ್ಟ್‌ಗಿಂತ ಮುಂದಕ್ಕೆ ಅಂದರೆ ಕೆಂಪೆಚ್ಚರದ ಆಚೆಗೆ ಹೋಗಿ ಜುಲೈ-ಆಗಸ್ಟ 2019 ರಲ್ಲಿ ಮಾಡಿದ ಕರ್ತವ್ಯಗಳಿಂದ, ಕಂಡುಕೊಂಡ ಅನುಭವಗಳನ್ನು, ಸೆಪ್ಟೆಂಬರ್ 2019 ರಲ್ಲಿ ಮತ್ತೊಮ್ಮೆ ಮಳೆ ಹೆಚ್ಚಾಗಿ ಪ್ರವಾಹ ಬಂದಾಗ, ಮತ್ತೊಮ್ಮೆ ನಮ್ಮ ಅನುಕ್ರಮಣಿಕೆಗಳನ್ನು ಕಾರ್ಯಗತಗೊಳಿಸಿ ಹೋಲಿಸಲಾಯಿತು. ನಾವು ಮಾಡಿದ ಕ್ವಾಂಟಮ್ ಕಂಪ್ಯೂಟಿಂಗ್ (Quantum Computing) ಮತ್ತು ಪ್ರೆಡಿಕ್ಟಿವ್ ಅನಾಲೈಸಿಸ್ (Predictive Analysis) ಒಂದು ಹಂತದ ಮಟ್ಟಿಗೆ ಮೌಲ್ಯಗೊಂಡು (Validate) ಕಾರ್ಯಯುತವಾಯಿತು.

ಮುಂದಿನ ವರ್ಷಗಳಲ್ಲಿ ವ್ಯಾಪಕವಾದ ಪ್ರವಾಹವು ಬಂದಾಗ, ನಿರ್ವಹಣೆಯು ಸುಲಭ ಸಾಧ್ಯವಾಗಲಿ ಎಂದು ಹಲವು ಕಡೆಗಳಲ್ಲಿ ಚರ್ಚಿಸಲಾಯಿತು. ಸಿಬ್ಬಂದಿಗಳೊಂದಿಗೂ ವಿವೇಚಿಸಲಾಯಿತು. ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸನಲ್ಲಿ - ಇಂಜಿನಿಯರಿಂಗ್ ಫಾರ್ ಎ ಚೇಂಜ್ ಎಂಬ ವಿಷಯದಡಿಯಲ್ಲಿ ವಿಚಾರಸಂಕಿರಣ ನಡೆಸಿ ತಾಂತ್ರಿಕ ನಿಪುಣರೊಂದಿಗೆ ಚರ್ಚಿಸಲಾಯಿತು. ಮಾಡಿದ ಎಲ್ಲಾ ಪ್ರವಾಹ ನಿರ್ವಹಣೆಗಳು, ಕರ್ತವ್ಯಗಳು ಜನತೆಯ ನೆನಪುಗಳಲ್ಲಿ ಮತ್ತು ಪೊಲೀಸರ ನೆನಪುಗಳಲ್ಲಿ ಇಡುವುದು ಅವಶ್ಯಕವಾದದ್ದು. ಮುಂದೆ ಇದೇ ತರಹದ ಪ್ರವಾಹ, ಪ್ರಕೃತಿ ವಿಕೋಪದ ಪರಿಸ್ಥಿತಿಯಲ್ಲಿ ದಕ್ಷತೆಯಿಂದ ಸುಲಭವಾಗಿ ಕಾರ್ಯನಿರ್ವಹಿಸಲು 'Beyond Red Alert – Saving Lives' “ಕೆಂಪೆಚರದ ಆಚೆಗೆ-ಜೀವನ ರಕ್ಷೆ” ಯನ್ನು ಸರಳವಾಗಿ ಪರಿವಿಡಿಗಳೊಂದಿಗೆ, ಫೋಟೋಗಳೊಂದಿಗೆ ರಚಿಸಲಾಗಿದೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತಾ.

ರಾಘವೇಂದ್ರ ಸುಹಾಸ

ಹೆಚ್.ಜಿ.ರಾಘವೇಂದ್ರ ಸುಹಾಸ, ಐಪಿಎಸ್
ಪೊಲೀಸ್ ಮಹಾನಿರೀಕ್ಷಕರು,
ಉತ್ತರ ವಲಯ ಬೆಳಗಾವಿ

ಮಾಹಿತಿ ಸಂಗ್ರಹಣೆಯ ಮತ್ತು ವಿಶ್ಲೇಷಣೆಯಿಂದ ಈ ಕೆಳಗಿನ ದಿನಾಂಕಗಳಂದು ಪ್ರವಾಹಕ್ಕೆ ತುತ್ತಾದ ಗ್ರಾಮಗಳ ವಿವರವನ್ನು, ನೀರಿನ ಹರಿವಿನ ಆಧಾರದ ಮೇಲೆ ಯಾವ ಯಾವ ಗ್ರಾಮಗಳಿಗೆ ಪ್ರಾಧಾನ್ಯತೆ ನೀಡಿ, ಸ್ಥಳಾಂತರಿಸಿದೆವು ಎಂದು ಕೊಡಲಾಗಿದೆ. ಮುಂಚಿತವಾಗಿ ಎಲ್ಲಿ ಎಷ್ಟು ನೀರಿನ ಹರಿವು ಉಂಟಾಗುವುದು ಮತ್ತು ಯಾವ ಸ್ಥಳಗಳಲ್ಲಿ ಅಪಾಯದ ಮಟ್ಟ ಮೀರಿ ನದಿಗಳು ಹರಿಯುವವು ಮುಂತಾದವುಗಳನ್ನು ಪರಿಗಣಿಸಿ ಈ ಅನುಕ್ರಮಣಿಕೆಯನ್ನು ಕೊಡಲಾಗಿದೆ. ಇದರ ಉದ್ದೇಶ ಮುಂಬರುವ ವರ್ಷಗಳಲ್ಲಿ ವ್ಯಾಪಕವಾದ ಪ್ರವಾಹವು ಬಂದಾಗ, ಆ ಸಂದರ್ಭದಲ್ಲಿ ನಮ್ಮ ಪೊಲೀಸರಿಗೆ ಅನುಕೂಲವಾಗಲೆಂದು, ಸೂಕ್ಷ್ಮವಾದ ಮಾಹಿತಿಯನ್ನು ಕೊಡಲಾಗಿದೆ. ಈ ಮಾಹಿತಿಯಲ್ಲಿರುವ ರೂಪರೇಖೆಯ ಮತ್ತು ಅನುಕ್ರಮಣಿಕೆಯ ಆಧಾರದ ಮೇಲೆ ಸ್ಥಳೀಯ ಪ್ರವಾಹ ಮತ್ತು ಮಳೆಯ ಪರಿಸ್ಥಿತಿಗಳನುಸಾರವಾಗಿ ಜನರನ್ನು ರಕ್ಷಿಸುವ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಬೆಳಗಾವಿ ಜಿಲ್ಲೆ : ಗ್ರಾಮಸ್ಥರ ಸ್ಥಳಾಂತರದ ಅನುಕ್ರಮಣಿಕೆ

ದಿನಾಂಕ: 30.07.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 160000 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಕಾಗವಾಡ ಪೊಲೀಸ್ ಠಾಣೆ** ವ್ಯಾಪ್ತಿಯ **ಮಂಗಾವತಿ, ಶಹಾಪೂರ, ಜುಗುಳ, ಕುಸನಾಳ, ಮುಳವಾಡ, ಕತ್ರಾಳ, ಬಣಜವಾಡ, ಕ್ರಿಷ್ಣಾ ಕಿತ್ತೂರ ಮತ್ತು ಉಗಾರ ಬಿ.ಕೆ., ಉಗಾರ ಕೆ.ಎಚ್, ಗ್ರಾಮಗಳ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 01.08.2019 ರಂದು ಕಲ್ಲೋಳದಲ್ಲಿ ನೀರಿನ ಹರಿವು 190114 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 160000 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಥಣಿ ಪೊಲೀಸ್ ಠಾಣೆ** ವ್ಯಾಪ್ತಿಯ **ಸಪ್ತಸಾಗರ, ತೀರ್ಥ, ನದಿ ಇಂಗಳಗಾಂವ, ದರೂರ, ಖವಟಕೊಪ್ಪ, ಶೇಗುಣಸಿ, ಹುಲಗಬಾಳಿ, ಅವರಖೋಡ, ನಾಗನೂರ ಪಿ.ಕೆ., ದೊಡವಾಡ, ಸತ್ತಿ, ಮಹಿಷವಾಡಗಿ, ಜನವಾಡ, ಸವದಿ, ಶಿರಹಟ್ಟಿ ಮತ್ತು ನಂದೇಶ್ವರ, ತಂಗಡಿ, ಚಿಕ್ಕೂಡ, ಕರ್ಲಟ್ಟಿ, ಹಲ್ಯಾಳ, ಬಳವಾಡ, ರಾಮವಾಡಿ, ಗ್ರಾಮಗಳ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 01.08.2019 ರಂದು ಕಲ್ಲೋಳದಲ್ಲಿ ನೀರಿನ ಹರಿವು 190114 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 160000 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಐಗಳಿ ಪೊಲೀಸ್ ಠಾಣೆ** ವ್ಯಾಪ್ತಿಯ **ಝುಂಜರವಾಡ** ಗ್ರಾಮದ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 01.08.2019 ರಂದು ಕಲ್ಲೋಳದಲ್ಲಿ ನೀರಿನ ಹರಿವು 190114 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ದೂದಗಂಗಾ ಮತ್ತು ವೇದಗಂಗಾ** ನದಿಯಲ್ಲಿ 25000 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ, **ಕರಡಗಾ ಎಂಬಲ್ಲಿ** ನದಿಯ ಹರಿವನ್ನು ಗಮನಿಸಿ ಮುಂಜಾಗ್ರತಾ ಕ್ರಮವಾಗಿ **ಸದಲಗಾ ಪೊಲೀಸ್ ಠಾಣೆ** ವ್ಯಾಪ್ತಿಯ **ಕರಡಗಾ, ಬಾರವಾಡ ಭೋಜ ಸದಲಗಾ, ಜನವಾಡ, ಮಲಿಕವಾಡ, ಎಕ್ಸಂಬಾ, ಚಾಂದಶಿರದವಾಡ, ಬೆಡಕಿಹಾಳ, ಬೋರಗಾಂವ, ಮಮದಾಪೂರ, ಬೋಜವಾಡಿ, ಬೈನಕವಾಡಿ ಮತ್ತು ಮಾಂಗೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 02.08.2019 ರಂದು **ದೂದಗಂಗಾ ಮತ್ತು ವೇದಗಂಗಾ** ನದಿಯಲ್ಲಿ ನೀರಿನ ಹರಿವು 32032 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ದೂದಗಂಗಾ ಮತ್ತು ವೇದಗಂಗಾ** ನದಿಯಲ್ಲಿ 25000 ಕ್ಯೂಸೆಕ್ಸ್ ನೀರು ಉಕ್ಕಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಬಿಸಿಪಿಎಸ್ ನಿಪ್ಪಾಣಿ ಪೊಲೀಸ್ ಠಾಣೆ** ವ್ಯಾಪ್ತಿಯ **ಯಮಗರ್ಣಿ, ಜತ್ರಾಟ ಪಡ್ಲಿಹಾಳ ಮತ್ತು ನಾಗನೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 02.08.2019 ರಂದು ದೂದಗಂಗಾ ಮತ್ತು ವೇದಗಂಗಾ ನದಿಯಲ್ಲಿ ನೀರಿನ ಹರಿವು 32032 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ** 2620 ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ** ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ ಒಟ್ಟಾಗಿ ಸರಿಸುಮಾರು 35000 ಕ್ಯೂಸೆಕ್ಸ್ ನೀರು ಉಕ್ಕಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಘಟಪ್ರಭಾ ಪೊಲೀಸ್ ಠಾಣೆ** ವ್ಯಾಪ್ತಿಯ **ದೂಪದಾಳ, ಶಿಂಗಳಾಪೂರ, ಲೋಳಸೂರ, ಬಸಳಿಗುಂದಿ, ನಲ್ಲಾನಟ್ಟಿ, ಬಳೋಬಾಳ, ಬೀರನಗಡ್ಡಿ, ಹುಣಶ್ಯಾಳ ಪಿಜಿ, ಸಾವಳಗಿ, ನಂದಗಾಂವ, ಮುತ್ನಾಳ ಮತ್ತು ಶಿಂದಿಕುರಬೇಟ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ 44038** ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ** ಒಟ್ಟಾಗಿ ಸರಿಸುಮಾರು 61000 ಕ್ಯೂಸೆಕ್ಸ್ ನೀರು ಒಟ್ಟಾಗಿ ಘಟಪ್ರಭಾ ನದಿಯಲ್ಲಿ 104038 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 30.07.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ** 2620 ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ** ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ ಒಟ್ಟಾಗಿ ಸರಿಸುಮಾರು 30000 ಕ್ಯೂಸೆಕ್ಸ್ ನೀರು ಉಕ್ಕಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ** ವ್ಯಾಪ್ತಿಯ **ಮೆಳವಂಕಿ ಗ್ರಾಮ, ಮರಡಿಮಠಗ್ರಾಮ, ಕೊಣ್ಣೂರ ಪಟ್ಟಣ, ಅಡಿಬಟ್ಟಿಗ್ರಾಮ ಮತ್ತು ಚಿಗಡೊಳ್ಳಿ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ 44038** ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ** ಒಟ್ಟಾಗಿ ಸರಿಸುಮಾರು 61000 ಕ್ಯೂಸೆಕ್ಸ್ ನೀರು ಒಟ್ಟಾಗಿ ಘಟಪ್ರಭಾ ನದಿಯಲ್ಲಿ 104038 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.




ಬೈಲಹೊಂಗಲದ ಎಮ್ ಕೆ ಹುಬ್ಬಳ್ಳಿ ಸಮೀಪ
ಪ್ರವಾಹ ಕಾರ್ಯಾಚರಣೆಯ ಕರ್ತವ್ಯ
ನಿರ್ವಹಿಸುತ್ತಿರುವಾಗ ಕಾರ ಡಿಕ್ಕಿ ಹೊಡೆದ ಪರಿಣಾಮ
ಕರ್ತವ್ಯ ನಿರತ ಕಿತ್ತೂರ ಪಿಎಸ್ಐ
ಈರಣ್ಣ ಲಟ್ಟಿ ಅವರು ಅಸುನೀಗಿದ್ದಾರೆ.
















Nira River
DHOOM DAM
Panchgani
WAI
Mahabaleshwar
Krishna River
Kanher R
SATARA
KANHERI DAM
Yerla River
Dahivadi
Man River
Bhima River
KOYANA DAM
Koyana River
Karad
VARNA DAM
Islampur
DIGRAJ KT WEIR
JATTA
ANKALI Barrage
ARJUNAWAD BARRAGE
RATANAGIRI
Varna River
SANGLI
KURUNDWAD BARRAGE
MAHISAL BARRAGE
Panchaganga River
KOLHAPUR
ATHNI
RAJAPUR BARRAGE
KALAMMA WADI DAM
RADHANAGARI
Vedaganga River
CHIKODI
HIDKAL DAM
SANKESHWAR
GADHINGLAJ
GOKAK
YAMAKANMARDI
OROS
(Sindhurg)
Ghataprabha River
MARKANDEYA DAM
BELAGAVI
MANOLI
NAVILUTEERTH DA


INTERVEL TIME
DETAILS OF VARIOUS STRUCTRURES FROM ALAMATTI TO KOYANA ALONG KRISHNA RIVER
SOLAPUR
Bur River
Bhima River
MAHARASHTRA STATE
KARNATAKA STATE
TIKOTA
VIJAYAPUR
Bhima River
Krishna River
JAMKHANDI
KOLHAR
MUDHOL
NARAYANPUR DAM
SANGAM
ALAMATTI DAM
KALADAGI
LOKAPUR
HUNGUND
NARGUND
KARNATAKA NEERAVARI NIGAM LIMITED
(A GOVT. OF KARNATAKA UNDERTAKING)
SCHEMATIC DRAWING SHOWING DAM'S BARRAGES, BRIDGES COMES UNDER KRISHNA RIVER BASIN
Ploted By B. P. Melamatti

ದಿನಾಂಕ: 31.07.2019 ರಂದು **ಬಳ್ಳಾರಿ ನಾಲಾ ಹಳ್ಳದಲ್ಲಿ** 12000 ಕ್ಯೂಸೆಕ್ಸ್ ನೀರು ಹೆಚ್ಚಾಗಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಗಿ ಪೊಲೀಸ್ ಠಾಣೆ** ವ್ಯಾಪ್ತಿಯ **ಕುಂದರಗಿ** ಗ್ರಾಮದ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 03.08.2019 ರಂದು ಬಳ್ಳಾರಿ ನಾಲಾ ಹಳ್ಳದಲ್ಲಿ 18000 ಕ್ಯೂಸೆಕ್ಸ್ ನೀರಿನ ಹರಿವು ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 31.07.2019 ರಂದು **ಬಳ್ಳಾರಿ ನಾಲಾ ಹಳ್ಳದಲ್ಲಿ** 12000 ಕ್ಯೂಸೆಕ್ಸ್ ಹೆಚ್ಚಿನ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಗಿ ಪೊಲೀಸ್ ಠಾಣೆ** ವ್ಯಾಪ್ತಿಯ **ಅಂಕಲಗಿ, ಬೂದಿಹಾಳ, ಯದ್ದಲಗುಡ್ಡ, ಅಕ್ಕತಂಗೇರಹಾಳ ಮತ್ತು ಸುಲಧಾಳ** ಗ್ರಾಮದ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಬಳ್ಳಾರಿ ನಾಲಾದಲ್ಲಿ 21000 ಕ್ಯೂಸೆಕ್ಸ್ ಮತ್ತು ಮಾರ್ಕಾಂಡೆಯ ನದಿಯಲ್ಲಿ 27000 ಕ್ಯೂಸೆಕ್ಸ್ ನೀರಿನ ಹರಿವು ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 31.07.2019 ರಂದು **ಮಲಪ್ರಭಾ ನದಿಯಲ್ಲಿ** 8544 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಸವದತ್ತಿ ಪೊಲೀಸ್ ಠಾಣೆ ವ್ಯಾಪ್ತಿಯ** **ಮುನವಳ್ಳಿ ಪಟ್ಟಣ, ತೆಗ್ಗಿಹಾಳ ಗ್ರಾಮ, ಅರ್ಟಗಲ್ಲ ಗ್ರಾಮ, ಜಕಬಾಳ ಗ್ರಾಮ, ಬಸರಗಿ ಗ್ರಾಮ, ಭಂಡಾರಹಳ್ಳಿ ಗ್ರಾಮ, ಹಳ್ಳೂರ ಗ್ರಾಮ, ಕಿಟದಾಳ, ಇನಾಂ ಹೊಂಗಲ ಮತ್ತು ಹಿರೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 30855 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಖಾನಾಪೂರ ಪೊಲೀಸ್ ಠಾಣೆ** ವ್ಯಾಪ್ತಿಯ **ನೀಲಾವಡಾ, ಕುಸಮಳಿ, ಹಿರೇಹಟ್ಟಿಹೊಳಿ, ದುರ್ಗಾನಗರ, ಮಾರುತಿನಗರ ಮತ್ತು ಲೋಂಡಾ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 39992 ಕ್ಯೂಸೆಕ್ಸ್ ಹೆಚ್ಚಾದ್ದರಿಂದ **ಮೇಲ್ಕಂಡ ಹಳ್ಳಿಗಳು** ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ನಂದಗಡ ಪೊಲೀಸ್ ಠಾಣೆ** ವ್ಯಾಪ್ತಿಯ **ತಟ್ಟಿಹಳ್ಳ** ಗ್ರಾಮದಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 39992 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ತಟ್ಟಿಹಳ್ಳ** **ನಂದಗಡ ಪೊಲೀಸ್ ಠಾಣೆ** ವ್ಯಾಪ್ತಿಯ **ಕರವಿನಕೊಪ್ಪ** ಗ್ರಾಮದ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 40364 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಕಟಕೋಳ ಪೊಲೀಸ್ ಠಾಣೆ** ವ್ಯಾಪ್ತಿಯ **ಸುನ್ನಾಳ, ಮಾಗನೂರ, ಕಿಲ್ಲಾತೋರಗಲ್ಲ, ಬೋಚಬಾಳ, ಮಲ್ಲಾಪೂರ, ಗೊನಗನೂರ, ರಾಮಾಪೂರ, ಹಳೆತೋರಗಲ್ಲ, ಹಾಲೋಳ್ಳಿ, ಕಂಕಣವಾಡಿ, ಮಲ್ಲಾಪೂರ ಮತ್ತು ಖಾನಪೇಠ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 40364 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಸವದತ್ತಿ ಪೊಲೀಸ್ ಠಾಣೆ** ವ್ಯಾಪ್ತಿಯ **ಶಿಂದೋಗಿ** ಗ್ರಾಮದ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 40364 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಮಲಪ್ರಭಾ ನದಿಯಲ್ಲಿ** 26101 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮತ್ತು ನವಿಲುತೀರ್ಥದಿಂದ 2620 ಕ್ಯೂಸೆಕ್ಸ್ ಹರಿಯುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ **ರಾಮದುರ್ಗ ಪೊಲೀಸ್ ಠಾಣೆ** ವ್ಯಾಪ್ತಿಯ **ರಾಮದುರ್ಗ/ ಕಿಲಬನೂರ, ರಂಕಲಕೊಪ್ಪ, ಚಿಕ್ಕಮೂಲಂಗಿ, ಮಾರಡಗಿ, ಹಂಪಿಹೋಳಿ, ಚಿಕ್ಕತಡಸಿ ಹಿರೇತಡಸಿ, ಸಂಗಳ, ಲಿಂಗದಾಳ, ಹಲಗತ್ತಿ, ಇಡಗಲ್, ತುರನೂರ, ಹುಲಿಗೊಪ್ಪ, ಗೊನ್ನಾಗರ, ಘಟಕನೂರ, ಕೊಳಚಿ, ದೊಡ್ಡಮಂಗಡಿ, ಚಿಂಚಖಂಡಿ, ಅವರಾದಿ, ಸೂರೆಬಾನ/ಮನಿಹಾಳ ಮತ್ತು ಬೆನ್ನೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 40000 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 190114 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಕುಡಚಿ ಪೊಲೀಸ್ ಠಾಣೆ** ವ್ಯಾಪ್ತಿಯ **ಕೃಷ್ಣಾ(ಹಾಲಾಳ ಹಳ್ಳ) ಕುಡಚಿ, ಚಿಂಚಲಿ, ಗುಂಡವಾಡ, ಖೇಮಲಾಪೂರ, ಸಿದ್ದಾಪೂರ, ಪರಮಾನಂದವಾಡಿ ಮತ್ತು ಶಿರಗೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** ನೀರಿನ ಹರಿವು 294825 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.










Airport Belagavi




06:59:06
ON AIR



ದಿನಾಂಕ: 01.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 190114 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಿ ಪೊಲೀಸ್ ಠಾಣೆ** ವ್ಯಾಪ್ತಿಯ **ಯಡೂರವಾಡಿ (ಕಮತತೋಟ)ಯ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಕೃಷ್ಣಾ ನದಿಯಲ್ಲಿ ನೀರಿನ ಹರಿವು 294825 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 190114 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಿ ಪೊಲೀಸ್ ಠಾಣೆ** ವ್ಯಾಪ್ತಿಯ **ಇಂಗಳಿ (ಧನವಡೆತೋಟ) ಮತ್ತು ಯಡೂರವಾಡಿ (ಡೋಣಿತೋಟ)** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 04.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** ನೀರಿನ ಹರಿವು 231119 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಕೃಷ್ಣಾ ನದಿಯ ಕಲ್ಲೋಳದಲ್ಲಿ** 190114 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ರಾಯಬಾಗ ಪೊಲೀಸ್ ಠಾಣೆ** ವ್ಯಾಪ್ತಿಯ **ಭಿರಡಿ, ಜಲಾಲಪೂರ, ಹಳೆ ದಿಗ್ಗೇವಾಡಿ, ಬಾವನಸವದತ್ತಿ, ಹೊಸ ದಿಗ್ಗೇವಾಡಿ ಮತ್ತು ನಸಲಾಪೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು ಕೃಷ್ಣಾ ನದಿಯ **ಕಲ್ಲೋಳದಲ್ಲಿ** ನೀರಿನ ಹರಿವು 264000 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಘಟಪ್ರಭಾ ನದಿಯಲ್ಲಿ** 2474 ಕ್ಯೂಸೆಕ್ಸ್ ನೀರು ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ** ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ ಒಟ್ಟಾಗಿ ಸರಿಸುಮಾರು 33000 ಕ್ಯೂಸೆಕ್ಸ್ ನೀರು ಉಕ್ಕಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಗೋಕಾಕ ಶಹರ ಪೊಲೀಸ್ ಠಾಣೆ** ವ್ಯಾಪ್ತಿಯ ಗೋಕಾಕ ಶಹರದ **ದಾಳಿಂಬೆ ತೋಟ ಮತ್ತು ಅವಟಿ ಗಲ್ಲಿಯ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 04.08.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ 2413** ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ** ಒಟ್ಟಾಗಿ ಸರಿಸುಮಾರು 55000 ಕ್ಯೂಸೆಕ್ಸ್ ನೀರು ಒಟ್ಟಾಗಿ ಘಟಪ್ರಭಾ ನದಿಯಲ್ಲಿ 57413 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಘಟಪ್ರಭಾ ನದಿಯಲ್ಲಿ** 2474 ಕ್ಯೂಸೆಕ್ಸ್ ಮತ್ತು ಮಾರ್ಕಂಡೆಯ ನದಿಯಲ್ಲಿ 15000 ಕ್ಯೂಸೆಕ್ಸ್ ನೀರು ಹೆಚ್ಚಾಗಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಗೋಕಾಕ ಶಹರ ಪೊಲೀಸ್ ಠಾಣೆ** ವ್ಯಾಪ್ತಿಯ ಗೋಕಾಕ ಶಹರದ **ಅಂಬಿಗೇರ ಗಲ್ಲಿ ಮತ್ತು ಬೋಜರಾಗಗಲ್ಲಿಯ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಘಟಪ್ರಭಾ ನದಿಯ ಹಿಡಕಲ್‌ನಿಂದ 58000 ಕ್ಯೂಸೆಕ್ಸ್ ನೀರಿನ ಹರಿವು ಮತ್ತು ಮಾರ್ಕಂಡೆಯ ನದಿಯಲ್ಲಿ 23000 ಕ್ಯೂಸೆಕ್ಸ್ ನೀರಿನ ಹರಿವು ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಹಿರಣ್ಯಕೇಶಿ ನದಿಯಲ್ಲಿ** 20000 ಕ್ಯೂಸೆಕ್ಸ್ ನೀರುಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 190114 ಕ್ಯೂಸೆಕ್ಸ್ ನೀರು ಮತ್ತು ಘಟಪ್ರಭಾ ನದಿಯಲ್ಲಿ 18000 ಕ್ಯೂಸೆಕ್ಸ್ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಹುಕ್ಕೇರಿ ಪೊಲೀಸ್ ಠಾಣೆ** ವ್ಯಾಪ್ತಿಯ **ಅರ್ಜುನವಾಡ, ಗೌಡವಾಡ, ಬಸ್ತವಾಡ, ಮದಮಕ್ಕನಾಳ, ಬೆಣಿವಾಡ ಮತ್ತು ಸುಲ್ತಾನಪೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಹಿರಣ್ಯಕೇಶಿ ನದಿಯಲ್ಲಿ ನೀರಿನ ಹರಿವು 27000 ಕ್ಯೂಸೆಕ್ಸ್ ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 294825 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮತ್ತು ಹಿಡಕಲ್‌ನಿಂದ 58000 ಕ್ಯೂಸೆಕ್ಸ್ ನೀರು ಬಂದಿದ್ರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಘಟಪ್ರಭಾ ನದಿಯಲ್ಲಿ** 2474 ಕ್ಯೂಸೆಕ್ಸ್ ನೀರು ಮತ್ತು ಮಾರ್ಕಂಡೆಯದಲ್ಲಿ 15,000 ಕ್ಯೂಸೆಕ್ಸ್ ನೀರು ಉಕ್ಕಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಗೋಕಾಕ ಶಹರ ಪೊಲೀಸ್ ಠಾಣೆ** ವ್ಯಾಪ್ತಿಯ ಗೋಕಾಕ ಶಹರದ **ಕಿಲ್ಲಾ, ಬಣಗಾರಗಲ್ಲಿ, ಸಂಗಮ ನಗರ ಮತ್ತು ಮಾರ್ಕಂಡೆಯ ನಗರದ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಘಟಪ್ರಭಾ ನದಿಯ ಹಿಡಕಲ್‌ನಿಂದ 58000 ಕ್ಯೂಸೆಕ್ಸ್ ನೀರಿನ ಹರಿವು ಮತ್ತು ಮಾರ್ಕಂಡೆಯ ನದಿಯಲ್ಲಿ 23000 ಕ್ಯೂಸೆಕ್ಸ್ ನೀರಿನ ಹರಿವು ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು **ಘಟಪ್ರಭಾ ನದಿಯಲ್ಲಿ** 2474 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಮೂಡಲಗಿ ಪೊಲೀಸ್ ಠಾಣೆ** ವ್ಯಾಪ್ತಿಯ **ಮಸಗುಪ್ಪಿ, ರಂಗಾಪೂರ, ಮುನ್ಯಾಳ, ಕಮಲದಿನ್ನಿ, ಗುಜನಟ್ಟಿ, ಪಟಗುಂದಿ, ಪುಲಗಡ್ಡಿ ಮತ್ತು ಧರ್ಮಟ್ಟಿ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು **ಘಟಪ್ರಭಾ ನದಿಯ ಹಿಡಕಲ್‌ನಿಂದ 44038** ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ** ಒಟ್ಟಾಗಿ ಸರಿಸುಮಾರು 61000 ಕ್ಯೂಸೆಕ್ಸ್ ನೀರು ಒಟ್ಟಾಗಿ ಘಟಪ್ರಭಾ ನದಿಯಲ್ಲಿ 104038 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.






REDMI NOTE 6 PRO
MI DUAL CAMERA









ದಿನಾಂಕ: 01.08.2019 ರಂದು ಘಟಪ್ರಭಾ ನದಿಯಲ್ಲಿ 2474 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಕುಲಗೋಡ ಪೊಲೀಸ್ ಠಾಣೆ** ವ್ಯಾಪ್ತಿಯ **ಅವರಾದಿ, ಅರಳಿಮಟ್ಟಿ, ಢವಳೇಶ್ವರ, ಬೀಸನಕೊಪ್ಪ, ಹುಣಶ್ಯಾಳ. ಪಿ. ವಾಯ್, ಬೈರನಟ್ಟಿ, ಸುಣದೋಳಿ, ತಿಗಡಿ, ಹಡಗಿನಾಳ, ಉದಗಟ್ಟಿ, ಕಲಾರಕೊಪ್ಪ ಮತ್ತು ತಳಕಟ್ಟನೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು **ಘಟಪ್ರಭಾ ನದಿಯ ಹಿಡಕಲ್ಲ್‌ನಿಂದ 44038** ಕ್ಯೂಸೆಕ್ಸ್ ಮತ್ತು **ಹಿರಣ್ಯಕೇಶಿ ಮತ್ತು ಮಾರ್ಕಂಡೆಯ ನದಿಯಲ್ಲಿ ಮತ್ತು ಬಳ್ಳಾರಿ ನಾಲೆಯಲ್ಲಿ** ಒಟ್ಟಾಗಿ ಸರಿಸುಮಾರು 61000 ಕ್ಯೂಸೆಕ್ಸ್ ನೀರು ಒಟ್ಟಾಗಿ ಘಟಪ್ರಭಾ ನದಿಯಲ್ಲಿ 104038 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು ಹಿರಣ್ಯಕೇಶಿ ನದಿಯಲ್ಲಿ 20000 ಕ್ಯೂಸೆಕ್ಸ್ ನೀರು ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 190114 ಕ್ಯೂಸೆಕ್ಸ್ ನೀರು ಮತ್ತು ಘಟಪ್ರಭಾ ನದಿಯಲ್ಲಿ 18000 ಕ್ಯೂಸೆಕ್ಸ್ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಯಮಕನಮರಡಿ ಪೊಲೀಸ್‌ಠಾಣೆ** ವ್ಯಾಪ್ತಿಯ **ಇಂಗಹಳ್ಳಿ, ನಿರ್ವಾಣಹಟ್ಟಿ, ಹೊಸೂರ, ಘೋಡಗೇರಿ, ಯರನಾಳ, ಚಿಕ್ಕಾಲಗುಡ್ಡ, ಕುರಣಿ, ಬಡಕುಂದ್ರಿ, ಯರಗಟ್ಟಿ, ನದಿಗುಡಿಕೇತರ, ಸಿಂದಿಹಟ್ಟಿ, ಪಾಶ್ಚಾಪೂರ, ಗಮುಚನಮರಡಿ, ಬಗರನಾಳ, ಯಮಕನಮರಡಿ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಹಿರಣ್ಯಕೇಶಿ ನದಿಯಲ್ಲಿ ನೀರಿನ ಹರಿವು 27000 ಕ್ಯೂಸೆಕ್ಸ್ ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 294825 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮತ್ತು ಹಿಡಕಲ್‌ನಿಂದ 58000 ಕ್ಯೂಸೆಕ್ಸ್ ನೀರಿನಿಂದಾಗಿ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು ಹಿರಣ್ಯಕೇಶಿ ನದಿಯಲ್ಲಿ 20000 ಕ್ಯೂಸೆಕ್ಸ್ ನೀರು ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 190114 ಕ್ಯೂಸೆಕ್ಸ್ ನೀರು ಮತ್ತು ಘಟಪ್ರಭಾ ನದಿಯಲ್ಲಿ 18000 ಕ್ಯೂಸೆಕ್ಸ್ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಹುಕ್ಕೇರಿ ಪೊಲೀಸ್‌ಠಾಣೆ** ವ್ಯಾಪ್ತಿಯ **ಮದಿಹಳ್ಳಿ, ಅವರಗೋಳ ಮತ್ತು ಕೊಟಬಾಗಿ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 06.08.2019 ರಂದು ಹಿರಣ್ಯಕೇಶಿ ನದಿಯಲ್ಲಿ ನೀರಿನ ಹರಿವು 27000 ಕ್ಯೂಸೆಕ್ಸ್ ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 294825 ಕ್ಯೂಸೆಕ್ಸ್‌ಗೆ ಹೆಚ್ಚಾದ್ದರಿಂದ ಮತ್ತು ಹಿಡಕಲ್‌ನಿಂದ 58000 ಕ್ಯೂಸೆಕ್ಸ್ ನೀರಿನಿಂದಾಗಿ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು ಹಿರಣ್ಯಕೇಶಿ ನದಿಯಲ್ಲಿ 20000 ಕ್ಯೂಸೆಕ್ಸ್ ನೀರು ಮತ್ತು ಕೃಷ್ಣಾ ನದಿಯ ಕಲ್ಲೋಳದಲ್ಲಿ 190114 ಕ್ಯೂಸೆಕ್ಸ್ ನೀರು ಮತ್ತು ಘಟಪ್ರಭಾ ನದಿಯಲ್ಲಿ 18000 ಕ್ಯೂಸೆಕ್ಸ್ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಸಂಕೇಶ್ವರ ಪೊಲೀಸ್‌ಠಾಣೆ** ವ್ಯಾಪ್ತಿಯ **ಸಂಕೇಶ್ವರ ಶಹರ, ಕೋಚರಿ ಮತ್ತು ಹೆಬ್ಬಾಳ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಹಿರಣ್ಯಕೇಶಿ ನದಿಯಲ್ಲಿ ನೀರಿನ ಹರಿವು 38000 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 01.08.2019 ರಂದು ಘಟಪ್ರಭಾ ನದಿಯಲ್ಲಿ 2474 ಕ್ಯೂಸೆಕ್ಸ್ ಮತ್ತು ಮಾರ್ಕಂಡೆಯ ನದಿಯಲ್ಲಿ 15000 ಕ್ಯೂಸೆಕ್ಸ್ ನೀರು ಹೆಚ್ಚಾಗಿ ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಗೋಕಾಕ ಶಹರ ಪೊಲೀಸ್ ಠಾಣೆ** ವ್ಯಾಪ್ತಿಯ ಗೋಕಾಕ ಶಹರದ **ಬಸವಣಗಲ್ಲಿ, ಮಟನ ಮಾರ್ಕೆಟ, ಉಪ್ಪಾರಗಲ್ಲಿ, ವಡ್ಡರಗಲ್ಲಿ, ಹಾಳಬಾಗ ಗಲ್ಲಿ, ಕುಂಬಾರಗಲ್ಲಿ ಮತ್ತು ಜನತಾ ಪ್ಲಾಟನ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 07.08.2019 ರಂದು ಘಟಪ್ರಭಾದಲ್ಲಿ 89134 ಕ್ಯೂಸೆಕ್ಸ್ ಮತ್ತು ಮಾರ್ಕಂಡೆಯ ನದಿಯಲ್ಲಿ 27000 ಕ್ಯೂಸೆಕ್ಸ್ ನೀರಿನ ಹರಿವು ಹೆಚ್ಚಾದ್ದರಿಂದ ಮೇಲ್ಕಂಡ ಸ್ಥಳಗಳು ಜಲಾವೃತವಾಗತೊಡಗಿದವು.

ದಿನಾಂಕ: 03.08.2019 ರಂದು ಕೃಷ್ಣಾ ನದಿಯ ಕಲ್ಲೋಳದಲ್ಲಿ 205118 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಿ ಪೊಲೀಸ್ ಠಾಣೆ** ವ್ಯಾಪ್ತಿಯ **ಮಾಂಜರಿ, ಮಾಂಜರಿವಾಡಿ, ಕಲ್ಲೋಳ, ಯಡೂರ, ಯಡೂರವಾಡಿ ಮತ್ತು ಚಂದೂರ** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 05.08.2019 ರಂದು ಕೃಷ್ಣಾ ನದಿಯಲ್ಲಿ ನೀರಿನ ಹರಿವು 264380 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 04.08.2019 ರಂದು ಕೃಷ್ಣಾ ನದಿಯ ಕಲ್ಲೋಳದಲ್ಲಿ 231119 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ಅಂಕಲಿ ಪೊಲೀಸ್ ಠಾಣೆ** ವ್ಯಾಪ್ತಿಯ **ಇಂಗಳಿ ಗ್ರಾಮದ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 09.08.2019 ರಂದು ಕೃಷ್ಣಾ ನದಿಯಲ್ಲಿ ನೀರಿನ ಹರಿವು 391896 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಯು ಜಲಾವೃತವಾಗತೊಡಗಿದವು.

ದಿನಾಂಕ: 04.08.2019 ರಂದು ದೂದಗಂಗಾ ಮತ್ತು ವೇದಗಂಗಾ ನದಿಯಲ್ಲಿ 34496 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮುಂಜಾಗ್ರತಾ ಕ್ರಮವಾಗಿ **ನಿಪ್ಪಾಣಿ ಗ್ರಾಮೀಣ ಪೊಲೀಸ್ ಠಾಣೆ** ವ್ಯಾಪ್ತಿಯ **ಕುನ್ನೂರ (ಭಾಗಶಹ ಮುಳಗಡೆ), ಕೊಗನೋಳಿ (ಭಾಗಶಹ ಮುಳಗಡೆ), ಕೋಡ್ನಿ (ಭಾಗಶಹ ಮುಳಗಡೆ), ಹುನ್ನರಗಿ (ಭಾಗಶಹ ಮುಳಗಡೆ), ಸಿದ್ನಾಳ (ಭಾಗಶಹ ಮುಳಗಡೆ), ಭಿವಶಿ (ಭಾಗಶಹ ಮುಳಗಡೆ), ಬೂದಿಹಾಳ (ಭಾಗಶಹ ಮುಳಗಡೆ), ಕುರ್ಲಿ(ಭಾಗಶಹ ಮುಳಗಡೆ), ಭಾಟನಾಂಗನೂರ (ಭಾಗಶಹ ಮುಳಗಡೆ), ಸಂದಲಗಾ ಮತ್ತು ಸುಳಗಾಂವ (ಭಾಗಶಹ ಮುಳಗಡೆ)** ಗ್ರಾಮಗಳ ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 09.08.2019 ರಂದು ದೂದಗಂಗಾ ಮತ್ತು ವೇದಗಂಗಾ ನದಿಯಲ್ಲಿ ನೀರಿನ ಹರಿವು 60896 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

ದಿನಾಂಕ: 04.08.2019 ರಂದು ಮಲಪ್ರಭಾ ನದಿಯಲ್ಲಿ 31032 ಕ್ಯೂಸೆಕ್ಸ್ ನೀರು ಹರಿಯುತ್ತಿದ್ದದರಿಂದ ಮತ್ತು ನವಿಲುತೀರ್ಥದಿಂದ 2425 ಕ್ಯೂಸೆಕ್ಸ್ ನೀರು ಹೊಗುತ್ತಿದ್ದರಿಂದ ಮುಂಜಾಗ್ರತಾ ಕ್ರಮವಾಗಿ **ರಾಮದುರ್ಗ ಪೊಲೀಸ್ ಠಾಣೆ** ವ್ಯಾಪ್ತಿಯ **ರಾಮದುರ್ಗ ಪಡಕೋಟಿ, ವಿಠ್ಠಲ ಪೇಠ, ಯಾನಂಪೇಠ, ಹಲಗತ್ತಿ, ದೊಡಮಂಗಡಿ, ಚಿಂಚಖಂಡಿ, ಘಟಕನೂರ ಮತ್ತು ಗೊಣ್ಣಾಗರ ಗ್ರಾಮಗಳ** ಜನ/ಜಾನುವಾರುಗಳನ್ನು ಸುರಕ್ಷಿತ ಸ್ಥಳಾಂತರ ಪ್ರಾರಂಭಿಸಲಾಯಿತು. ದಿನಾಂಕ: 08.08.2019 ರಂದು ಮಲಪ್ರಭಾ ನದಿಯಲ್ಲಿ ನೀರಿನ ಹರಿವು 94618 ಕ್ಯೂಸೆಕ್ಸ್ ಹೆಚ್ಚಾದ್ದರಿಂದ ಮೇಲ್ಕಂಡ ಹಳ್ಳಿಗಳು ಜಲಾವೃತವಾಗತೊಡಗಿದವು.

MAHARASTRA DAILY DAM DATA

Kolhpur Irrigation Division (North) Kolhapur


Daily Water Level Report — **11-08-2019**

Name of Project	Taluka	F.S.L	Contents		Dead Storage	Todays Total Storage		Todays Contents TMC	%age	Todays live storage			Discharge			Rainfall mm	
			MCFT	TMC		Water Level M	Total Contents MCFT			MCFT	TMC	%age	Hydropower outlet	Weir	Total Discharge	Last 24 Hrs	From 1.6.19 total
1	2	3	4	5	6	8	9	10	11	12	13	14	16	17	18	19	20
Radhanagari	Radhanagari	590.98	236.79	8.361	16.82	590.82	233.81	8.2558311	98.7415	216.99	7.66192	98.6453	1400	2856	4256	120	5077
Tulashi	Radhanagari	616.91	98.29	3.471	6.37	615.85	92.892	3.2800165	94.5081	86.522	3.05509	94.1275	0	1962	1962	229	4631
Warana	Shirala	626.9	974.188	34.399	194.84	625.35	919.203	32.457058	94.3558	724.363	25.5773	92.9447	771	15886	16657	105	3770
Dudhganga	Radhanagari	646	719.12	25.392	40.01	644.43	666.305	23.52723	92.6556	626.295	22.1145	92.2229	950	0	950	132	3926
